೧) ಚಾಮುಂಡೇಶ್ವರಿ ಬೆಟ್ಟ

ಚಾಮುಂಡಿ ಬೆಟ್ಟ ಮೈಸೂರಿನಿಂದ ಸುಮಾರು ೧೩ ಕಿಲೋ ಮೀಟರ್ ದೂರದಲ್ಲಿದೆ. ಮೈಸೂರು ಕರ್ನಾಟಕ ರಾಜ್ಯದಲ್ಲಿನ ಪ್ರಮುಖ ನಗರ. ಭಾರತದಲ್ಲಿ ಮಾತ್ರವಲ್ಲ, ವಿದೇಶದಲ್ಲೂ ಅದು ಪ್ರಸಿದ್ಧಿ. ಚಾಮುಂಡಿ ಬೆಟ್ಟದ ಮೇಲ್ತುದಿಯಲ್ಲಿ ಐತಿಹಾಸಿಕ ಚಾಮುಂಡೇಶ್ವರಿ ದೇವಾಲಯವಿದೆ. ಚಾಮುಂಡೇಶ್ವರಿ ದುರ್ಗೆಯ ಒಂದು ಅವತಾರ; ಶಕ್ತಿಯ ಪ್ರತಿ ಸ್ವರೂಪ. ಚಂಡಮುಂಡರಲ್ಲದೆ ಮಹಿಷಾಸುರನ ಮರ್ಧಿನಿ ಅವಳು. ಯದು ವಂಶದ ಮೈಸೂರು ರಾಜರ ಅಧಿದೇವತೆ; ಮೈಸೂರು ಜನತೆಯ ಅಭಿಮಾನ ದೇವತೆ.

'ಸ್ಕಂದ' ಪುರಾಣ ಮತ್ತಿತರ ಪ್ರಾಚೀನ ಗ್ರಂಥಗಳು ಎಂಟು ಬೆಟ್ಟಗಳಿಂದ ಸುತ್ತುವರಿದ 'ತ್ರಿಮುಕುಟಕ್ಷೇತ್ರ' ಎಂಬ ಪವಿತ್ರ ಕ್ಷೇತ್ರವನ್ನು ಉಲ್ಲೇಖಿಸುತ್ತವೆ. ಅದರ ಪಶ್ಚಿಮ ಭಾಗದಲ್ಲಿರುವ ಚಾಮುಂಡಿ ಬೆಟ್ಟ ಆ ಎಂಟು ಬೆಟ್ಟಗಳ ಪೈಕಿ ಒಂದಾಗಿದೆ. 'ಮಹಾಬಲೇಶ್ವರ' ದೇವಸ್ಥಾನ ಅತಿ ಪ್ರಾಚೀನವಾದದ್ದಾಗಿದ್ದು, ಬೆಟ್ಟವನ್ನು 'ಮಹಾಬಲಾದ್ರಿ' ಎಂದು ಹಿಂದೆ ಗುರುತಿಸಲಾಗುತ್ತಿತ್ತು.

'ದೇವಿ ಮಹಾತ್ಮೆ' ಪುರಾಣದ ಮುಖ್ಯ ವಸ್ತುವಾಗಿರುವ 'ಚಾಮುಂಡಿ' ದೇವಿಯು ಬೆಟ್ಟದ ಮೇಲೆ ನೆಲೆಸಿರುವುದರಿಂದ ಅವಳ ಹೆಸರು ಬೆಟ್ಟಕ್ಕೆ ಬಂದಿದೆ. ಚಾಮುಂಡೇಶ್ವರಿ ದೇವಿ ಹೆಚ್ಚಿನ ಪ್ರಾಮುಖ್ಯತೆ ಪಡೆದ ಕಾರಣ ಬೆಟ್ಟಕ್ಕೆ ಅವಳ ಹೆಸರೇ ಬೆಳೆದು ಬಂದಿದೆ. ಈಶ್ವರನ ಸತಿ ಪಾರ್ವತಿಯ ಒಂದು ಅವತಾರ ಚಾಮುಂಡಿ. ತಾಯಿ ಚಾಮುಂಡಿಯನ್ನು ಪೂಜಿಸಲು ದೇಶ ವಿದೇಶಗಳಿಂದ ಸಾವಿರಾರು ಜನ ಭಕ್ತಾದಿಗಳು ಪ್ರತಿ ವರ್ಷ ಇಲ್ಲಿಗೆ  ಬರುತ್ತಾರೆ. ತಮ್ಮ ಆಸೆ–ಆಕಾಂಕ್ಷೆಗಳನ್ನು ಈಡೇರಿಸುತ್ತಾಳೆಂದು ನಂಬಿ ಇಲ್ಲಿಗೆ ಆಗಮಿಸುತ್ತಾರೆ. ದೇವಿಯನ್ನು ಪೂಜಿಸಿ ಅವಳ ಆಶೀರ್ವಾದ ಪಡೆಯುತ್ತಾರೆ.

ಬೆಟ್ಟವು ಸಮುದ್ರ ಮಟ್ಟಕ್ಕಿಂತ ೩,೪೮೯ ಅಡಿ ಎತ್ತರದಲ್ಲಿದ್ದು ಹತ್ತಿಹೋಗಲು ೧,೦೦೦ ಮೆಟ್ಟಿಲುಗಳಿವೆ. ಮೈಸೂರಿಗೆ ಶಿಖರಪ್ರಾಯವಾಗಿರುವ ಚಾಮುಂಡಿ ಬೆಟ್ಟವನ್ನು ಮೈಸೂರಿಗೆ ಪ್ರಯಾಣಿಸುವಾಗ ದೂರದಿಂದಲೇ ಗುರುತಿಸಬಹುದು. ಬೆಟ್ಟದ ಮೇಲಕ್ಕೆ ವಾಹನಗಳಲ್ಲಿ ಹೋಗಿ ಬರಲು ಉತ್ತಮ ರಸ್ತೆಯಿದೆ. ಮೈಸೂರಿನ ಕಡೆಯಿಂದ ಅಲ್ಲದೆ ಬೆಟ್ಟದ ಹಿಂಬದಿಯಿಂದಲೂ ಬೆಟ್ಟದ ಮೇಲಕ್ಕೆ ಹೋಗಿ ಬರಲು ರಸ್ತೆ ಸೌಕರ್ಯವಿದೆ.

ಇಡೀ ಬೆಟ್ಟವು ಪ್ರಕೃತಿಯ ಸೊಬಗಿನಿಂದ ಕೂಡಿದ್ದು ವನ್ಯ ಪ್ರದೇಶದಲ್ಲಿ ಹಲವಾರು ಬಗೆಯ ಮರಗಿಡಗಳೂ ಪ್ರಾಣಿಪಕ್ಷಿಗಳೂ ಇವೆ. ಬೆಟ್ಟದ ದಾರಿಯಲ್ಲಿ ಪ್ರಯಾಣಿಸುವಾಗ ಮೈಸೂರಿನ ಪಕ್ಷಿನೋಟ ಕಾಣಸಿಗುತ್ತದೆ. ಮೈಸೂರಿನ ಪ್ರಮುಖ ಸ್ಥಳಗಳನ್ನೇ ಅಲ್ಲದೆ ದೂರದ ಕೆಲವು ಜಾಗಗಳನ್ನೂ ಇಲ್ಲಿಂದ ಗುರುತಿಸಬಹುದು. ಸಂಜೆಯ ವೇಳೆ ಮೈಸೂರು ನಗರ ದೀಪಗಳಿಂದ

ಪ್ರಜ್ವಲಿಸುತ್ತಿರುವಾಗ ಅದರ ಸುಂದರ ನೋಟ ಕಾಣಬಹುದು. ಅದರಲ್ಲಿಯೂ ದಸರಾ ಹಬ್ಬದ ಸಂದರ್ಭದಲ್ಲಿ ಈ ನೋಟ ಇನ್ನಷ್ಟು ರಮ್ಯವಾಗಿರುತ್ತದೆ. ಬೆಟ್ಟದ ಮೇಲಿಂದ ಅರಮನೆ, ಲಲಿತ ಮಹಲ್ ಅರಮನೆ, ವಸ್ತುಪ್ರದರ್ಶನ ಪ್ರದೇಶ, ರೇಸ್‌ಕೋರ್ಸ್, ಸಂತ ಫಿಲೋಮಿನಾ ಚರ್ಚ್, ಕುಕ್ಕರಹಳ್ಳಿ ಕೆರೆ, ದೂರದ ಕೃಷ್ಣರಾಜಸಾಗರ ಇತ್ಯಾದಿ ಪ್ರಮುಖ ಸ್ಥಳಗಳನ್ನು ಗುರುತಿಸಬಹುದು.

ಪ್ರಮುಖವಾದ ಮಹಾಬಲೇಶ್ವರ ದೇವಸ್ಥಾನದ ಜೊತೆಗೆ ಬೆಟ್ಟದ ಮೇಲೆ ಇನ್ನೂ ಕೆಲ ದೇವಸ್ಥಾನಗಳು ಇವೆ. ದೇವಸ್ಥಾನಗಳ ಜೊತೆಗೆ ಭೇಟಿ ನೀಡಬಹುದಾದ ಕೆಲ ಆಕರ್ಷಕ ಸ್ಥಳಗಳು ಬೆಟ್ಟದ ಮೇಲಿದ್ದು ಬೆಟ್ಟದ ಹಾದಿಯಲ್ಲಿ ಕಾಣ ಬರುವ ‘ನಂದಿ’ ವಿಗ್ರಹ ಅವುಗಳಲ್ಲಿ ಪ್ರಮುಖವಾದುದು. ಹಾಗೆಯೇ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಮುನ್ನ ಸಿಗುವ ‘ಮಹಿಷಾಸುರ’ನ ಗಾರೆಯ ವಿಗ್ರಹವೂ ಒಂದು. ದೇವಸ್ಥಾನದ ಪಕ್ಕದಲ್ಲಿಯೇ ಚಾಮುಂಡಿಬೆಟ್ಟ ಎಂಬ ಗ್ರಾಮವಿದೆ.

ಬೆಟ್ಟಕ್ಕೆ ಹೋಗಿ ಬರಲು ಮೈಸೂರಿನಿಂದ ಬಸ್ ಸೌಲಭ್ಯವಿದೆ. ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ (ಕೆ.ಎಸ್.ಆರ್.ಟಿ.ಸಿ) ಪ್ರತಿ ದಿನವೂ ಭಕ್ತಾದಿಗಳಿಗೆ ಅನುಕೂಲವಾಗುವಂತೆ ಬಸ್ ಸೌಲಭ್ಯ ಕಲ್ಪಿಸಿದೆ.

-----------

೨) ಚಾಮುಂಡೇಶ್ವರಿ ದೇವಸ್ಥಾನ

ಚಾಮುಂಡೇಶ್ವರಿ ಪೌರಾಣಿಕ ಹಿನ್ನೆಲೆಯ ದೇವತೆಯಾಗಿದ್ದು ‘ದೇವಿ ಮಹಾತ್ಮೆ’ ಪುರಾಣದ ಮುಖ್ಯ ವಸ್ತುವಾಗಿದ್ದಾಳೆ. ಪೌರಾಣಿಕ ಹಿನ್ನೆಲೆಯ ಈ ಶಕ್ತಿ ದೇವತೆ ಬೆಟ್ಟದ ಮೇಲೆ ವಾಸವಾಗಿದ್ದ ಮಹಿಷಾಸುರನನ್ನು ವಧಿಸಿದಳೆಂಬ ಕಥೆ ‘ದೇವಿ ಮಹಾತ್ಮೆ’ಯಲ್ಲಿ ವರ್ಣಿತವಾಗಿದೆ. ಚಾಮುಂಡೇಶ್ವರಿಯಿಂದಲೇ ಬೆಟ್ಟಕ್ಕೆ ಹೆಸರು ಬಂದಿದ್ದು.

ಇಲ್ಲಿ ಹಿಂದೆ ಸಣ್ಣದೊಂದು ದೇವಸ್ಥಾನವಿತ್ತೆಂದು ಕ್ರಮೇಣ ಅಭಿವೃದ್ಧಿ ಹೊಂದಿ, ಹೆಚ್ಚಿನ ಪ್ರಾಮುಖ್ಯತೆ ಗಳಿಸಿ, ದೊಡ್ಡ ದೇವಸ್ಥಾನವಾಗಿ ಬೆಳೆಯಿತೆಂದು ತಿಳಿದು ಬರುತ್ತದೆ. ೧೩೯೯ ರಲ್ಲಿ ಅಧಿಕಾರಕ್ಕೆ ಬಂದ ಮೈಸೂರು ಅರಸರು ದೇವಿ ಆರಾಧಕರಾಗಿದ್ದು ಶ್ರದ್ಧಾಭಕ್ತಿಯಿಂದ ದೇವಸ್ಥಾನವನ್ನು ಅಭಿವೃದ್ಧಿಪಡಿಸಿ ಅದನ್ನು ದೊಡ್ಡದಾದ ದೇವಾಲಯವನ್ನಾಗಿಸಿದ್ದಾರೆ. ಅದಕ್ಕೆ ಹೆಚ್ಚಿನ ಮಹತ್ವ ತಂದಿದ್ದಾರೆ.

ಚಾಮುಂಡಿ ಬೆಟ್ಟದ ಚಾರಿತ್ರಿಕ ಹಿನ್ನೆಲೆಯಲ್ಲಿ ಹೊಯ್ಸಳ, ವಿಜಯನಗರ ಹಾಗೂ ಮೈಸೂರು ಅರಸರ ಕೊಡುಗೆಯಿದೆ. ೧೨ನೇ ಶತಮಾನದ ಹೊಯ್ಸಳ ದೊರೆ ವಿಷ್ಣುವರ್ಧನ ಹಾಗೂ ೧೭ ನೇ ಶತಮಾನದ ವಿಜಯನಗರದ ಅರಸರ ಹಿನ್ನೆಲೆಯನ್ನು ಗುರುತಿಸಲಾಗಿದೆ. ಕ್ರಿ.ಶ. ೧೫೭೩ ರಲ್ಲಿ ಚಾಮರಾಜ ಒಡೆಯರು ದೇವಿಯನ್ನು ಪೂಜಿಸಲು ಹೋಗುತ್ತಿದ್ದಾಗ ಅವರಿಗೆ ಸಿಡಿಲು ಬಡಿದು

ಅವರ ತಲೆಯ ಕೂದಲೆಲ್ಲಾ ಉದುರಿ ಹೋದವೆಂದು ಮೈಸೂರಿನ ಇತಿಹಾಸ ಹೇಳುತ್ತದೆ. ಹಲವಾರು ಇತರೆ ದೊರೆಗಳ ಕಾಣಿಕೆ-ಕೊಡುಗೆಗಳಿವೆ.

ಚಾಮುಂಡೇಶ್ವರಿ ದೇವಸ್ಥಾನ ಚೌಕಾಕೃತಿಯಲ್ಲಿ ನಿರ್ಮಾಣವಾಗಿದೆ. ದ್ರಾವಿಡ ಶೈಲಿಯಲ್ಲಿ ಕಟ್ಟಲಾಗಿರುವ ದೇವಸ್ಥಾನ, ಹೆಬ್ಬಾಗಿಲು, ಪ್ರವೇಶ ದ್ವಾರ, ನವರಂಗ, ಅಂತರಾಳ, ಗರ್ಭಗೃಹ ಮತ್ತು ಪ್ರಾಕಾರಗಳನ್ನು ಹೊಂದಿದೆ. ಮಹಾದ್ವಾರದ ಮೇಲೆ ಸುಂದರವಾದ 'ಗೋಪುರ' ಮತ್ತು ಗರ್ಭಗುಡಿಯ ಮೇಲೆ 'ವಿಮಾನ' ಶಿಖರಗಳಿವೆ. ಏಳು ಅಂತಸ್ತುಗಳ ಗೋಪುರ ೧೯ನೇ ಶತಮಾನದಲ್ಲಿ ನಿರ್ಮಿತವಾಗಿದ್ದು, ಪಿರಮಿಡ್ ಆಕಾರದಲ್ಲಿ ದ್ರಾವಿಡ ಶೈಲಿಯಲ್ಲಿ ನಿರ್ಮಿತವಾಗಿದೆ. ಶಿಖರದ ಮೇಲೆ ಏಳು ಚಿನ್ನದ ಕಲಶಗಳಿವೆ.

೧೮೨೭ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಸಾವಿರ ವರ್ಷಕ್ಕೂ ಹಿಂದಿನ ಹಿನ್ನೆಲೆಯಿರುವ ದೇವಸ್ಥಾನದ ಜೀರ್ಣೋದ್ಧಾರ ಮಾಡಿ ಮಹಾದ್ವಾರದ ಮೇಲೆ ಈ ದೊಡ್ಡ ಗೋಪುರವನ್ನು ಕಟ್ಟಿಸಿದರು. 'ಸಿಂಹವಾಹನ' ಒಂದನ್ನು ಮರದಲ್ಲಿ ನಿರ್ಮಿಸಿ ಕೊಡುಗೆ ನೀಡಿದರು. 'ಸಿಂಹ ವಾಹನ'ವನ್ನು ರಥೋತ್ಸವ ಸಂದರ್ಭದಲ್ಲಿ ಬಳಸಲಾಗುತ್ತಿದ್ದು ಅದರಲ್ಲಿ ದೇವಿಯ ಉತ್ಸವ ಮೂರ್ತಿಯನ್ನಿಟ್ಟು ರಥವನ್ನು ಎಳೆಯಲಾಗುತ್ತದೆ.

ದ್ವಾರದ ಮೇಲ್ಭಾಗದಲ್ಲಿ ಸಣ್ಣದೊಂದು ಗಣಪತಿಯ ವಿಗ್ರಹವನ್ನು ನೋಡಬಹುದು. ದ್ವಾರದ ಬೃಹತ್ ಮರದ ಬಾಗಿಲನ್ನು ಬೆಳ್ಳಿಯ ತಗಡಿನಿಂದ ಹೊದಿಸಲಾಗಿದ್ದು ಬೆಳ್ಳಿಯ ಬಾಗಿಲಿನ ಮೇಲೆ ದೇವಿಯ ಹಲವು ಸ್ವರೂಪಗಳನ್ನು ತೋರಲಾಗಿದೆ. ಮಹಾದ್ವಾರದ ಕೆಳಪಾರ್ಶ್ವದಲ್ಲಿ ಇಂದ್ರಾದಿ ಅಷ್ಟದಿಕ್ಪಾಲಕರ ವಿಗ್ರಹಗಳಿವೆ.

ಮಹಾದ್ವಾರದಿಂದ ಒಳಗೆ ಹೋದರೆ ಬಲಭಾಗದಲ್ಲಿ ದಕ್ಷಿಣಾಭಿಮುಖವಾಗಿ ಗಣಪತಿಯ ಸಣ್ಣ ವಿಗ್ರಹವು ಸ್ಥಾಪಿಸಲ್ಪಟ್ಟಿದೆ. ವಿಘ್ನರಾಜನಿಗೆ ನಮಿಸಿ ಕೆಲವು ಕಲ್ಲಿನ ಮೆಟ್ಟಿಲುಗಳನ್ನು ಹತ್ತಿ ಹೋದರೆ ದೇವಸ್ಥಾನದ ಬಲಿಪೀಠ ಮತ್ತು ಧ್ವಜಸ್ತಂಬ ಕಂಡು ಬರುತ್ತದೆ. ಬಲಿಪೀಠದ ಮೇಲೆ ದೇವಿಯ ಪಾದಗಳನ್ನು ರೂಪಿಸಲಾಗಿದೆ. ಇವೆರಡರ ಮುಂಭಾಗದಲ್ಲಿ ಗರ್ಭಗುಡಿಗೆ ಅಭಿಮುಖವಾಗಿ ಸಣ್ಣದೊಂದು ನಂದಿ ವಿಗ್ರಹವಿದೆ. ಮಾತೆ ಚಾಮುಂಡಿಯನ್ನು ಅದು ವೀಕ್ಷಿಸುತ್ತಾ ಕುಳಿತಿದೆ. ಧ್ವಜಸ್ತಂಬಕ್ಕೆ ಈಶಾನ್ಯದಲ್ಲಿ ಗೋಡೆಯ ಮೆಲೆ ಆಂಜನೇಯನ ವಿಗ್ರಹವಿದ್ದು ಅದಕ್ಕೂ ಪೂಜೆ ಜರುಗುತ್ತದೆ. ಇಲ್ಲಿನ ಪ್ರವೇಶ ದ್ವಾರದಲ್ಲಿ ನಂದಿನಿ ಮತ್ತು ಕಮಲಿನಿ ಎಂಬ ದ್ವಾರಪಾಲಿಕೆಯರ ವಿಗ್ರಹಗಳು ದ್ವಾರದ ಎಡ ಮತ್ತು ಬಲ ಭಾಗದಲ್ಲಿವೆ.

ಗರ್ಭಗುಡಿಗೆ ಮುಂಚೆ ಇರುವ ಅಂತರಾಳದ ಎಡಭಾಗದಲ್ಲಿ ಮುದ್ದಾದ ಗಣಪತಿ ವಿಗ್ರಹ ಮತ್ತು ಬಲಭಾಗದಲ್ಲಿ ಭೈರವ ದೇವರ ವಿಗ್ರಹಗಳಿವೆ. ಭೈರವ ದೇವರ ಎಡಭಾಗದಲ್ಲಿ ಚಾಮುಂಡಿಯ

ಪಂಚಲೋಹದ ಸುಂದರ ಉತ್ಸವ ಮೂರ್ತಿಯಿದೆ. ಗಣಪತಿಯ ಬಲಭಾಗದಲ್ಲಿ ಭಕ್ತನ ದಿರಿಸು ತೊಟ್ಟಿರುವ ಮುಮ್ಮಡಿ ಕೃಷ್ಣರಾಜ ಒಡೆಯರ ಆರು ಅಡಿ ಎತ್ತರದ ಸುಂದರ ಭಕ್ತ ವಿಗ್ರಹ ಕಾಣಬರುತ್ತದೆ. ಮಹಾರಾಜರು ತಮ್ಮ ಮೂವರು ಪತ್ನಿಯರೊಂದಿಗೆ ಕೈ ಮುಗಿದು ನಿಂತಿದ್ದಾರೆ. ಮಹಾರಾಜರ ಎಡಬಲಭಾಗಗಳಲ್ಲಿ ನಿಂತಿರುವವರೆಂದರೆ ರಮಾವಿಲಾಸ, ಲಕ್ಷ್ಮೀವಿಲಾಸ ಮತ್ತು ಕೃಷ್ಣವಿಲಾಸ ಮಹಾರಾಣಿಯರು. ಇವರುಗಳ ಶಿಲಾ ವಿಗ್ರಹಗಳ ಪಾದದ ಬಳಿಯ ಪೀಠದ ಮೇಲೆ ಇವರ ಹೆಸರುಗಳನ್ನು ಕೆತ್ತಲಾಗಿದೆ.

ಗರ್ಭಗುಡಿಯಲ್ಲಿ ಮಹಿಷಮರ್ಧಿನಿಯಾದ ಚಾಮುಂಡೇಶ್ವರಿಯ ವಿಗ್ರಹ ವಿರಾಜಮಾನವಾಗಿದೆ. ಎಂಟು ಭುಜಗಳನ್ನು ಹೊಂದಿರುವ ಚಾಮುಂಡೇಶ್ವರಿ ಆಸೀನಳಾಗಿದ್ದಾಳೆ. ಈ ವಿಗ್ರಹವು ಬಹಳಷ್ಟು ಪುರಾತನವಾದದ್ದು. ಈ ಶಿಲಾಮೂರ್ತಿಯನ್ನು ಮಾರ್ಕಂಡೇಯ ಋಷಿಗಳು ಸ್ಥಾಪಿಸಿದರೆಂದು ಸ್ಥಳಪುರಾಣ ಹೇಳುತ್ತದೆ.

ದೇವಾಲಯದ ಅರ್ಚಕರು ತಾಯಿ ಸ್ವರೂಪದ ಈ ಶಿಲಾ ಪ್ರತಿಮೆಯನ್ನು ಪ್ರತಿ ದಿನ ಅಲಂಕರಿಸಿ ಪೂಜೆ ಮಾಡುತ್ತಾರೆ. ಯದುಕುಲದ ದೇವತೆಯಾಗಿ ಬೆಳೆದು ಬಂದಿರುವ ಚಾಮುಂಡೇಶ್ವರಿಗೆ ಮೈಸೂರಿನ ಮಹಾರಾಜರುಗಳು ಹಲವಾರು ಬೆಲೆಬಾಳುವ ಕಾಣಿಕೆಗಳನ್ನು ಶ್ರದ್ಧಾಭಕ್ತಿಯಿಂದ ಒಪ್ಪಿಸಿದ್ದಾರೆ. ಈ ಶಕ್ತಿ ದೇವತೆಗೆ ಮಾನವ ಮತ್ತು ಪ್ರಾಣಿ ಬಲಿಯನ್ನು ಹಿಂದೆ ಕೊಡಲಾಗುತ್ತಿತ್ತು. ಆದರೆ ೧೮ನೇ ಶತಮಾನದಲ್ಲಿ ಅದಕ್ಕೆ ಕಡಿವಾಣ ಬಿತ್ತು. ಈಗೇನಿದ್ದರೂ ಫಲಪುಷ್ಪಗಳ ಅರ್ಚನೆ; ಹಣ್ಣು ಹೂವುಗಳ ಸಮರ್ಪಣೆ.

ಗರ್ಭಗುಡಿಯ ಮೇಲ್ಭಾಗದಲ್ಲಿ ಇನ್ನೊಂದು ಸಣ್ಣ ಗೋಪುರ ಕಂಡು ಬರುತ್ತದೆ. ದೇವಾಲಯದ ಹೊರಗಿನಿಂದ ಈ 'ವಿಮಾನ'ವನ್ನು ಕಾಣಬಹುದು. ಒಳ ಪಾರ್ಶ್ವದಲ್ಲಿರುವ ಪ್ರಾಕಾರದಲ್ಲಿ ಹಲವು ಸಣ್ಣ ಮೂರ್ತಿಗಳಿದ್ದು ಅಲ್ಲಿಯೂ ಪೂಜೆ ಪುನಸ್ಕಾರಗಳು ಜರುಗುತ್ತವೆ. ಪ್ರಕಾರದಲ್ಲಿ ಪ್ರದಕ್ಷಿಣೆ ಮುಗಿಸಿ ದೇವಸ್ಥಾನದಿಂದ ಹೊರಬರಬಹುದು.

ಮೈಸೂರಿನ ಅಧಿ ದೇವತೆಯಾಗಿ ತಾಯಿ ಚಾಮುಂಡೇಶ್ವರಿ ಇಲ್ಲಿ ನೆಲೆಸಿರುವ ಕಾರಣ ಚಾಮುಂಡಿ ಬೆಟ್ಟ ಪ್ರಸಿದ್ಧಿ ಪಡೆದಿದೆ. ಗ್ರಾಮ ದೇವತೆಯಾಗಿ ಹಿಂದೆ ಇದೊಂದು ಪುಟ್ಟ ದೇವಸ್ಥಾನವಾಗಿತ್ತು. ಮೈಸೂರು ಮಹಾರಾಜರುಗಳ ಶ್ರದ್ಧೆ ಭಕ್ತಿಯಿಂದಾಗಿ ಕ್ರಮೇಣ ಅಭಿವೃದ್ಧಿ ಹೊಂದಿ ಚಾಮುಂಡಿ ವೈದಿಕ ಪರಂಪರೆಯ ಚಾಮುಂಡೇಶ್ವರಿಯಾಗಿ ಈಗ ಇದು ಒಂದು ದೊಡ್ಡ ದೇವಾಲಯವಾಗಿದೆ.

-------

೩) ಧಾರ್ಮಿಕ ಹಿನ್ನೆಲೆ

‘ಚಾಮುಂಡಿ’ ಎಂದು ಮೈಸೂರು ನಿವಾಸಿಗಳಲ್ಲಿ ಪ್ರಸಿದ್ಧವಾಗಿರುವ ಚಾಮುಂಡೇಶ್ವರಿ ಅವರ ಬಹಳಷ್ಟು ಧಾರ್ಮಿಕ ಕಾರ್ಯಗಳಲ್ಲಿ, ನಂಬುಗೆಯಲ್ಲಿ ಒಂದು ಭಾಗವಾಗಿ ಬಿಟ್ಟಿದ್ದಾಳೆ. ಇದು ಹಲವಾರು ಶತಮಾನಗಳಿಂದ ಬೆಳೆದು ಬಂದಿದೆ. ಅದರಲ್ಲಿಯೂ ಮೈಸೂರಿನ ರಾಜ ವಂಶಸ್ಥರ ಕುಲದೇವತೆಯಾಗಿ, ನವರಾತ್ರಿ ಉತ್ಸವದ ಕೇಂದ್ರ ಬಿಂದುವಾಗಿ ಚಾಮುಂಡಿ ಹೆಚ್ಚಿನ ಮಹತ್ವ, ಮನ್ನಣೆಗಳಿಸಿದ್ದಾಳೆ.

ಒಡೆಯರ ಆಳ್ವಿಕೆ ಪ್ರಾರಂಭವಾದ ೧೪ನೆ ಶತಮಾನದಿಂದಲೂ ಅವರ ರಾಜ ದೇವತೆಯಾಗಿ ಕಂಡುಬರುವ ಚಾಮುಂಡಿ ಮೈಸೂರಿನ ರಾಜ ಮಹಾರಾಜರೂ ಸೇರಿದಂತೆ ಎಲ್ಲ ಭಕ್ತರ ಆಶೋತ್ತರಗಳನ್ನು ಈಡೇರಿಸುವ ನೆಚ್ಚಿನ ದೇವಿಯಾಗಿದ್ದಾಳೆ. ಶುಭ ದಿನಗಳಂದು ದೇಶದ ಹಲವಾರು ಸ್ಥಳಗಳಿಂದ ಜನರನ್ನು ಬರಮಾಡಿಕೊಳ್ಳುತ್ತಾಳೆ; ದೇಶ ವಿದೇಶಗಳಿಂದ ಹರಿದು ಬರುವ ಪ್ರವಾಸಿಗರಿಗೆ ದರ್ಶನ ನೀಡುತ್ತಾಳೆ.

ಸಿಂಹದ ಮೇಲೆ ಕುಳಿತಿರುವ ಚಾಮುಂಡೇಶ್ವರಿ ತನ್ನ ಬಲಗೈಯಲ್ಲಿರುವ ತ್ರಿಶೂಲದಿಂದ ಮಹಿಷಾಸುರನನ್ನು ತಿವಿದು ಸಂಹಾರ ಮಾಡುತ್ತಿದ್ದಾಳೆ. ಮಹಿಷ ರೂಪ ತಾಳಿದ್ದ ಮಹಿಷಾಸುರ ಪೂರ್ವದಲ್ಲಿ ಮೈಸೂರಿನ ಭಾಗದಲ್ಲಿದ್ದನೆಂದು ನಂಬಲಾಗಿದೆ. ದೇವಾದಿ ದೇವತೆಗಳನ್ನು, ಜನರನ್ನೂ ಪೀಡಿಸುತ್ತಿದ್ದ ಎನ್ನುತ್ತವೆ ಪುರಾಣಗಳು. ಚಾಮುಂಡಿಯು ತನ್ನ ಇನ್ನೊಂದು ಕೈಯಲ್ಲಿರುವ ಖಡ್ಗದಿಂದ ಅವನ ಮಹಿಷರೂಪದ ಶಿರವನ್ನು ಕಡಿಯುತ್ತಿದ್ದಾಳೆ. ಮಹಿಷನ ದೇಹದ ಬಳಿ ಮಹಿಷ ಸತ್ತು ಬಿದ್ದಿದೆ.

ಮಹಿಷನ ಕಾಟ ತಡೆಯಲಾರದೆ ದೇವಾದಿ ದೇವತೆಗಳು ಅವನನ್ನು ಸಂಹರಿಸುವಂತೆ ಶಿವನ ಅರ್ಧಾಂಗಿ ಪಾರ್ವತಿಯನ್ನು ಬೇಡಿದರು. ತಮ್ಮೆಲ್ಲ ಆಯುಧಗಳನ್ನು ಅವಳಿಗೆ ನೀಡಿದರು. ಚಾಮುಂಡೇಶ್ವರಿಯ ರೂಪ ತಾಳಿದ ಪಾರ್ವತಿ ಎಲ್ಲ ದೇವರುಗಳು ಕೊಟ್ಟಿದ್ದ ಆಯುಧಗಳ ಬಲದಿಂದ ಮಹಿಷಾಸುರನ ಸಂಹಾರ ಮಾಡಿದಳು. ದೇವಿಯ ಈ ಮಹಾತ್ಮೆಯನ್ನು ‘ದೇವಿ ಭಾಗವತ’ದಲ್ಲಿ ವರ್ಣಿಸಲಾಗಿದೆ.

ಹಲವಾರು ಗ್ರಂಥಗಳು ದೇವಿಯ ಪರಾಕ್ರಮ ಮತ್ತು ಶಕ್ತಿಯನ್ನು ವಿವರಿಸುತ್ತವೆ. ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಪುರಾಣಗಳು ಅವಳ ಮಹಾತ್ಮೆಯನ್ನು ವರ್ಣಿಸುತ್ತವೆ. ಪವಿತ್ರ ದಿನಗಳಲ್ಲಿ ಭಕ್ತರು ಅವುಗಳನ್ನು ಭಕ್ತಿಯಿಂದ ಓದುತ್ತಾರೆ. ಅವಳ ಶ್ಲೋಕಗಳನ್ನು ಶ್ರದ್ಧೆಯಿಂದ ಪಠಿಸುತ್ತಾರೆ, ಸ್ತುತಿಸುತ್ತಾರೆ. ಶ್ರದ್ಧಾಭಕ್ತಿಯಿಂದ ಅವಳನ್ನು ಪ್ರಾರ್ಥಿಸುವ ಭಕ್ತರಿಗೆ ದೇವಿಯು ಸಕಲ ಸನ್ಮಂಗಳಗಳನ್ನು ಉಂಟುಮಾಡುತ್ತಾಳೆ. ಸಂತೋಷ ಮತ್ತು ಸಂತೃಪ್ತಿಯನ್ನು ನೀಡುತ್ತಾಳೆ; ಅವರ

ಆಶೋತ್ತರಗಳನ್ನು ಈಡೇರಿಸುತ್ತಾಳೆ. ಸಾಧಕರಿಗಾದರೋ ಸಿದ್ಧಿಯನ್ನು ಸಾಧಿಸಲು ಮಾರ್ಗ ತೋರುತ್ತಾಳೆ.

ನಂಬಿಕೆಗಳನ್ನು ಹೊತ್ತು ಸಾವಿರಾರು ಭಕ್ತರು ದೇಶದ ಹಲವಾರು ಭಾಗಗಳಿಂದ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುತ್ತಾರೆ. ಪವಿತ್ರ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೇವಸ್ಥಾನಕ್ಕೆ ಬಂದು ಅವಳಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಅದರಲ್ಲಿಯೂ ಶುಭ ದಿನಗಳಾದ ಮಂಗಳವಾರ ಮತ್ತು ಶುಕ್ರವಾರಗಳಂದು ಹೆಚ್ಚಿನ ಭಕ್ತರು ಇಲ್ಲಿಗೆ ಭೇಟಿ ನೀಡುತ್ತಾರೆ. ತಾಯಿಯ ದರ್ಶನ ಪಡೆದು ಪುನೀತರಾಗುತ್ತಾರೆ. ಅವಳ ಆಶೀರ್ವಾದ ಪಡೆದು ತೃಪ್ತಿಯಿಂದ ಹಿಂತಿರುಗುತ್ತಾರೆ.

---------------

೪) ಸರ್ವಶಕ್ತ್ಯಾತ್ಮಿಕೆ ದೇವಿ

ಚಾಮುಂಡೇಶ್ವರಿಯ ಮಹಾತ್ಮೆಯನ್ನು ವರ್ಣಿಸುವ ' ಶ್ರೀಮದ್ ದೇವಿಭಾಗವತ' ವನ್ನು ವ್ಯಾಸ ಮಹರ್ಷಿಗಳು ರಚಿಸಿದ್ದಾರೆ. ೧೮,೦೦೦ ಪದ್ಯಗಳಿಂದ ಕೂಡಿದ ಈ ಮಹಾಪುರಾಣವನ್ನು ಸೂತರು ಹಾಗೂ ಇತರೆ ಋಷಿಮುನಿಗಳಿಗೆ ಶೌನಕ ಮಹರ್ಷಿಗಳು ವಿವರಿಸಿದ್ದಾಗಿ ಹೇಳಲಾಗಿದೆ.

ಹಿಂದೂ ಸಂಪ್ರದಾಯದ ಪ್ರಕಾರ ಹೆಣ್ಣಿನ ರೂಪ ಶಕ್ತಿಯ ಸ್ವರೂಪ. ಹೆಚ್ಚು ಪ್ರಭಾವಶಾಲಿ; ಸಿದ್ಧಿ ಪ್ರದಾಯಿನಿ. ಈಕೆ ಜಗಜ್ಜನನಿ; ಆದಿ ಶಕ್ತಿ. ಶಿವನೂ ಸೇರಿದಂತೆ ಇತರೆ ಎಲ್ಲ ದೇವತೆಗಳಿಗಿಂತ ದುರ್ಗೆ ಪರಮಪವಿತ್ರಳೆಂದು ಭಾವಿಸಲಾಗಿದೆ. ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಈಶ್ವರನ ಶಕ್ತಿಗಳು ಏಕೀಭೂವಿಸಿ ಸೃಷ್ಟಿಯಾಗಿರುವುದರಿಂದ ಅವಳಲ್ಲಿ ಮಹತ್ತರ ಶಕ್ತಿ ಒಗ್ಗೂಡಿದೆ ಎಂಬ ನಂಬಿಕೆಯಿಂದ ಅವಳನ್ನು ನೆಚ್ಚಿರುವ ಭಕ್ತರು ಶ್ರದ್ಧಾಭಕ್ತಿಯಿಂದ ದೇವಿಯನ್ನು ಪೂಜಿಸುತ್ತಾರೆ.

ಅವಳ ಇಡೀ ದೇಹ ಸಮಸ್ತ ದೇವರುಗಳ ಕೊಡುಗೆಯಿಂದ ಕೂಡಿದ್ದು, ದೇವಿಯ ಮುಖದಲ್ಲಿ ಶಿವನ ಜ್ಯೋತಿ ಪ್ರತಿಬಿಂಬವಾಗುತ್ತಿದೆ. ಅವಳ ಕೈಗಳು ವಿಷ್ಣುವಿನ ಕೊಡುಗೆ. ಅವಳ ಪಾದಗಳು ಬ್ರಹ್ಮನ ಪಾದಗಳು.

ಅವಳ ಗುಂಗುರು ಕೂದಲು ಯಮನಿಂದಲೂ. ಕುಚಗಳು ಚಂದ್ರನ ಸೋಮನಾಥನಿಂದಲೂ, ನಡು ದೇವೇಂದ್ರನಿಂದಲೂ, ನಿತಂಬ ಮತ್ತು ಕಾಲುಗಳು ಸಮುದ್ರ ರಾಜನಾದ ವರುಣನಿಂದಲೂ, ಜಘನ ಭೂದೇವಿಯಿಂದಲೂ, ಕಾಲ್ಬೆರಳುಗಳು ಸೂರ್ಯನಿಂದಲೂ, ಕೈ ಬೆರಳುಗಳು ಗಂಗೆಯ ಮಕ್ಕಳಾದ ವಸು ದೇವತೆಗಳಿಂದಲೂ, ನ್ಯಾಸವು ಸಂಪತ್ತಿನ ರಕ್ಷಕನಾದ ಕುಬೇರನಿಂದಲೂ, ದಂತಗಳು ಪ್ರಜಾಪತಿಯಿಂದಲೂ, ಕಣ್ಣುಗಳು ಅಗ್ನಿಯಿಂದಲೂ, ಹುಬ್ಬುಗಳು ಸೂರ್ಯೋದಯ ಮತ್ತು

ಸೂರ್ಯಾಸ್ತದ ಸಂಧ್ಯೆಯರಿಂದಲೂ, ಕಿವಿಗಳು ವಾಯುವಿನ ಜ್ಯೋತಿಯಿಂದಲೂ ಸೃಷ್ಟಿಯಾಗಿರುವುದಾಗಿ ಪುರಾಣಗಳು ವಿವರಿಸುತ್ತವೆ.

ಎಲ್ಲ ದೇವರುಗಳ ಶಕ್ತಿಯು ಏಕೀರ್ಭವಿಸಿ ದುರ್ಗೆಯು ಸರ್ವಶಕ್ತ್ಯಾತ್ಮಿಕೆಯಾಗಿ ಸೃಷ್ಟಿಯಾಗಿರುವುದಾಗಿ ಪುರಾಣಗಳು ಹೇಳುತ್ತವೆ. ಇದರಿಂದಾಗಿ ಅವಳಿಗೆ ಹೆಚ್ಚಿನ ಪಾವಿತ್ರ್ಯತೆ ಕಲ್ಪಿಸಲಾಗಿದೆ.

----------

ಆ) ಶಸ್ತ್ರಾಸ್ತ್ರಗಳ ಪ್ರಭಾವ

ಮಹಿಷಾಸುರನನ್ನು ಹಾಗೂ ಇತರೆ ರಾಕ್ಷಸರನ್ನು ಸಂಹರಿಸಿ ಮಾನವರು ಮತ್ತು ದೇವರುಗಳನ್ನು ಅವನ ಹಿಂಸೆಯಿಂದ ತಪ್ಪಿಸಿ ಶಾಂತಿ ನೆಲೆಸುವಂತೆ ಮಾಡಲು ದೇವಿಗೆ ದೇವತೆಗಳು ತಮ್ಮ ಅಸ್ತ್ರಗಳನ್ನು ನೀಡಿದರು.

ಈಶ್ವರ ತನ್ನ ತ್ರಿಶೂಲವನ್ನೂ, ವಿಷ್ಣು ತನ್ನ ಚಕ್ರವನ್ನೂ, ವರುಣನು ತನ್ನ ಶಂಖ ಮತ್ತು ಪಾಶವನ್ನೂ, ಅಗ್ನಿ ತನ್ನ ಶೂಲವನ್ನೂ ಅವಳಿಗೆ ಕೊಟ್ಟರು. ದೇವಿಯು ವಾಯುವಿನಿಂದ ಬಾಣಗಳನ್ನು ಪಡೆದರೆ, ಇಂದ್ರನಿಂದ ವಜ್ರಾಯುಧವನ್ನು ಪಡೆದಳು. ಇಂದ್ರನ ವಾಹನವಾದ 'ಐರಾವತ' ಬಿಳಿ ಆನೆಯಿಂದ ಘಂಟೆಯು ಅವಳಿಗೆ ಲಭ್ಯವಾಯಿತು. ಯಮ ತನ್ನ ಖಡ್ಗ ಮತ್ತು ಗುರಾಣಿಯನ್ನು ನೀಡಿದ. ವಿಶ್ವಕರ್ಮನಿಂದ ಕೊಡಲಿ ಮತ್ತು ಕವಚವನ್ನು ಪಡೆದುಕೊಂಡಳು. ಶೃಂಗಗಳ ಅಧಿಪತಿ ಹಿಮವತ್ ತನ್ನ ಆಭರಣಗಳ ಜೊತೆಗೆ ವಾಹನವನ್ನಾಗಿ ಸಿಂಹವನ್ನು ದುರ್ಗೆಗೆ ಕೊಟ್ಟನು.

ಜೊತೆಗೆ ಹೊಸ ವಸ್ತ್ರಗಳು ಹಾಗೂ ಎದೆಯ ಭಾಗಕ್ಕೆ ಮತ್ತು ಶಿರಕ್ಕೆ ಅಲಂಕಾರಭೂಷಣವಾದ ಕೋಮಲ ಕಮಲಗಳು ಅವಳಿಗೆ ಕೊಡಲ್ಪಟ್ಟವು. ಇನ್ನೂ ಹಲವಾರು ಅಮೂಲ್ಯವಾದ ಮತ್ತು ಭದ್ಮ ರೂಪದ ಕೊಡುಗೆಗಳು ಇತರೆ ದೇವತೆಗಳಿಂದ ದೇವಿಗೆ ಸಮರ್ಪಿತವಾದುವು.

ಅಪರೂಪದ ವಸ್ತ್ರಾಭರಣಗಳು, ಸ್ವರ್ಣ ರಕ್ಷಾಕವಚ, ಅಸ್ತ್ರಾಸ್ತ್ರಗಳಿಂದ ಸಜ್ಜಿತಳಾದ ದುರ್ಗೆ ಸರ್ವಾಲಂಕೃತೆಯಾಗಿ ತಳಮಳ ಉಂಟುಮಾಡುತ್ತಿದ್ದ ರಾಕ್ಷಸ ಗಣಗಳೊಂದಿಗೆ ಯುದ್ಧಕ್ಕೆ ಸನ್ನದ್ಧಳಾದಳು. ಮಹಿಷಾಸುರ ಮತ್ತಿತರ ಅಸುರರಿಗೆ ಅವಳು ಇಡೀ ಭೂಮಿಯಿಂದ ಅಂತರಿಕ್ಷದವರೆಗೆ ಗೋಚರಿಸಿದಳು. ತಮ್ಮ ಅಪಾರ ಶಕ್ತಿಯ ಬಗ್ಗೆ ನಂಬಿಕೆಯಿದ್ದರೂ ಅವಳ ಬೃಹತ್ ರೂಪವನ್ನು ಕಂಡ ಇಡೀ ರಾಕ್ಷಸ ಸಮೂಹ ತಲ್ಲಣಿಸಿತು. ಅವರೆಲ್ಲ ದಿಗ್ಭ್ರಮೆ ಪಡುವಂತೆ ಅವಳು ಭೂಮ್ಯಾಕಾಶದವರೆಗೆ ಕಾಣಿಸಿಕೊಂಡಳು.

ದುರ್ಗೆಯು ಮಹಿಷಾಸುರನ ಸೈನ್ಯವನ್ನು ನಾಶ ಮಾಡುತ್ತಾ ಬಂದಂತೆಲ್ಲಾ ಮಹಿಷಾಸುರನಿಗೂ ತನ್ನ ಶಕ್ತಿಯ ಬಗ್ಗೆ ಶಂಕೆ ಪಡುವಂತಾಯಿತು. ತಾನು ನಂಬಿದ್ದಂತೆ ಸ್ವರ್ಗಸ್ಥಾನ ಸುಲಭವಲ್ಲ ಎಂದು ತೋರಿತು. ಯಾವುದೇ ಅಸುರ ಅವಳನ್ನು ಯುದ್ಧದಲ್ಲಿ ಸೋಲಿಸಲಾಗದು ಎಂದು ಮನವರಿಕೆಯಾಯಿತು.

ಅವಳ ಉಸಿರೇ ಅವಳ ಸೈನ್ಯ ಸಮೂಹಕ್ಕೆ ಮತ್ತೆ ಮತ್ತೆ ಜೀವ ತುಂಬುತ್ತಿತ್ತು. ದೈತ್ಯ ಸೈನ್ಯ ಅವಳ ಸೈನ್ಯದ ಯುದ್ಧದಾಳುಗಳನ್ನು ಸಾಯಿಸುತ್ತಿದ್ದರೂ ಅವರು ಮತ್ತೆ ಮತ್ತೆ ಜೀವ ಪಡೆಯುತ್ತಿದ್ದರು. ಅವಳ ಪರಾಕ್ರಮ ಕಂಡು ರಾಕ್ಷಸ ಸೈನ್ಯ ದಿಕ್ಕಾಪಾಲಾಗಿ ಚದುರುತ್ತಿತ್ತು. ಅಸುರ ಸೈನಿಕರು ಸುಲಭವಾಗಿ ಸಾವನ್ನಪ್ಪಿಕೊಳ್ಳುತ್ತಿದ್ದರು.

ರಣಾಂಗಣದಲ್ಲಿ ತನ್ನ ಸೈನ್ಯ ಸಮೂಹಕ್ಕೆ ಉಂಟಾಗುತ್ತಿದ್ದ ಸಾವುನೋವಿನಿಂದ ಮಹಿಷ ಕ್ರುದ್ಧಗೊಂಡ. ಮಾರುಛದ್ಮ ಧರಿಸಿ ಮಹಿಷ ರೂಪ ತಾಳಿದ. ದೇವತೆಗಳ ಸೈನ್ಯದತ್ತ ನುಗ್ಗಿ ಕಾದಾಳುಗಳನ್ನು ತಿವಿದು ಸಾಯಿಸಲಾರಂಭಿಸಿದ. ತನ್ನ ಬಾಲವನ್ನು ಚಾಟಿಯಂತೆ ಬಿರುಸಾಗಿ ಬೀಸುತ್ತಾ ಸಂಹಾರ ಕಾರ್ಯ ಮಾಡಲಾರಂಭಿಸಿದ. ದುರ್ಗೆಯ ವಾಹನವಾದ ಸಿಂಹ ಮಹಿಷನತ್ತ ಹಾರಿ ಮಹಿಷನನ್ನು ಯುದ್ಧಕ್ಕೆ ತೊಡಗಿಸಿಕೊಂಡಿತು. ಮಹಿಷ ಸಿಂಹದ ಜೊತೆಗೆ ಸೆಣೆಸುತ್ತಿದ್ದಾಗ ದುರ್ಗೆ ತನ್ನ ಪಾಶವನ್ನು ಅವನ ಕೊರಳಿಗೆ ಬೀಸಿ ಹಿಡಿದಳು.

ತನ್ನ ಛದ್ಮ ದೇಹದಿಂದ ಮಹಿಷ ಸಿಂಹ ರೂಪವನ್ನು ಪಡೆದಾಗ ದುರ್ಗೆ ಸಿಂಹವನ್ನು ವಧಿಸಿದಳು. ಕೂಡಲೇ ಅದು ಮಾನವ ರೂಪ ಪಡೆದು ದುರ್ಗೆಯ ಮುಂದೆ ನಿಂತು ಅವಳೆಸೆದ ಬಾಣಗಳನ್ನು ಎದುರಿಸಬೇಕಾಯಿತು. ಮಹಿಷ ಮತ್ತೆ ಮತ್ತೆ ಹಲವಾರು ರೂಪಗಳನ್ನು ಧರಿಸುತ್ತ ಅವಳಿಂದ ಸಾವನ್ನು ತಪ್ಪಿಸಿಕೊಳ್ಳುತ್ತಿದ್ದ. ಆನೆಯ ವೇಶವನ್ನು ಧರಿಸಿ ದೇವಿಯ ಸಿಂಹದತ್ತ ನುಗ್ಗಿದ. ತನ್ನ ಮೊನಚಾದ ದಂತಗಳಿಂದ ದೇವಿಯ ವಾಹನವಾದ ಸಿಂಹದ ಬಾಲಕ್ಕೆ ಆಘಾತ ಉಂಟುಮಾಡಿದ. ದುರ್ಗೆ ತನ್ನ ಖಡ್ಗದಿಂದ ಆನೆಯ ದಂತವನ್ನು ಕಡಿದು ಹಾಕಿದಳು.

ಮಹಿಷ ಮತ್ತೆ ಕೋಣನ ವೇಷ ಧರಿಸಿ ಬಂದ. ಬಂಡೆಗಳಲ್ಲಿ ಅಡಗಿ ತನ್ನ ಕೊಂಬುಗಳಿಂದ ಬಂಡೆಗಳನ್ನು ಅವಳತ್ತ ತೂರುತ್ತ ಬಂದ. ದುರ್ಗೆ ಕುಬೇರ ನೀಡಿದ್ದ ಅಮೃತವನ್ನು ಸೇವಿಸಿದಳು. ಮಹಿಷಾಸುರನ ಮೇಲೆ ನುಗ್ಗಿ ಅವನ ದೇಹವನ್ನು ತನ್ನ ಎಡಗಾಲಿನಿಂದ ತುಳಿದು ನಿಂತಳು. ಅವನ ಶಿರವನ್ನು ತನ್ನ ಕೈಯಿಂದ ಎಳೆದುಕೊಂಡು ಇನ್ನೊಂದು ಕೈಯಿಂದ ಅವನ ದೇಹವನ್ನು ತ್ರಿಶೂಲದಿಂದ ತಿವಿದಳು. ತನ್ನ ಕೈಗಳ ಪೈಕಿ ಒಂದರಲ್ಲಿ ಹಿಡಿದು ಕೊಂಡಿದ್ದ ಖಡ್ಗದಿಂದ ಅವನ ಶಿರವನ್ನು ಛೇದಿಸಿದಳು. ಮಹಿಷಾಸುರ ಕೊನೆಗೂ ಸಾವನ್ನಪ್ಪಿದ. ಮಹಾದುರ್ಗೆ ಮಹಿಷ ಮರ್ಧಿನಿಯಾಗಿ ವಿಜೃಂಭಿಸಿದಳು. ಸಮಸ್ತ ದೇವತೆಗಳೂ ಹರ್ಷೋದ್ಗಾರ ಮಾಡಿ ಪುಷ್ಪವೃಷ್ಟಿ ಮಾಡಿದರು.

-------

೬) 'ದೇವಿ ಮಹಾತ್ಮೆ'ಯಲ್ಲಿ ಚಾಮುಂಡಿ

ಚಾಮುಂಡೇಶ್ವರಿಯು 'ದೇವಿ ಮಹಾತ್ಮೆ'ಯಲ್ಲಿಯೂ ವರ್ಣಿತವಾಗಿರುವ ಶಕ್ತಿ ದೇವತೆ. 'ದೇವಿ ಮಹಾತ್ಮೆ' ಮಾರ್ಕಂಡೇಯ ಪುರಾಣದ ಒಂದು ಭಾಗವಾಗಿದ್ದು ೧೩ ಅಧ್ಯಾಯಗಳಲ್ಲಿ ವರ್ಣಿತವಾಗಿದೆ. ಶಕ್ತಿ ಸ್ವರೂಪಿಣಿಯಾಗಿ ಮೈದೋರಿದ ದುರ್ಗೆಯು ಚಂಡ–ಮುಂಡ ಎಂಬ ಇಬ್ಬರು ರಾಕ್ಷಸರನ್ನು, ಮಹಿಷಾಸುರ ಎಂಬ ರಾಕ್ಷಸನನ್ನು ಹಾಗೂ ಇತರೆ ರಾಕ್ಷಸರನ್ನು ಸಂಹಾರ ಮಾಡಿ ದೇವತೆಗಳನ್ನು, ಮಾನವರನ್ನು ರಕ್ಷಿಸಿದಳು ಎನ್ನುತ್ತದೆ ಅದು.

ದಾನವನಾದ ರಂಭ ರಕ್ತಬೀಜನಾಗಿ, ಅವನ ಮಗ ಮಹಿಷನಾಗಿ ಭೂಲೋಕದಲ್ಲಿ ಜನ್ಮ ತಾಳಿದರು. ದಾನವರೆಲ್ಲ ಸೇರಿ ಅತಿ ಶೂರನಾದ ಮಹಿಷನಿಗೆ ಪಟ್ಟ ಕಟ್ಟಿದರು. ಭೂಲೋಕವನ್ನು ಆಳುತ್ತಿದ್ದ ಮಹಿಷ ಸುಮೇರು ಪರ್ವತದಲ್ಲಿ ಕುಳಿತು ಕಠಿಣ ತಪಸ್ಸನ್ನು ಆಚರಿಸಿದ. ಅವನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ಬ್ರಹ್ಮನಿಂದ, ಯಾವುದೇ ಸ್ತ್ರೀ ತನ್ನನ್ನು ಸಾಯಿಸಲು ಅಶಕ್ಯಳಾಗಿರುವುದರಿಂದ, ತನಗೆ ಯಾವುದೇ ಪುರುಷನಿಂದ ಸಾವು ಬಾರದಂತೆ ವರವೊಂದನ್ನು ಪಡೆದುಕೊಂಡ.

ಬ್ರಹ್ಮನಿಂದ ಪಡೆದ ವರದಿಂದ ಅವನು ಅಹಂಕಾರದಿಂದ ಮೆರೆಯಲಾರಂಭಿಸಿದ. ಭೂಲೋಕದಲ್ಲಿನ ಮಾನವರನ್ನೂ, ದೇವಲೋಕದಲ್ಲಿನ ದೇವತೆಗಳನ್ನೂ ಹಿಂಸಿಸಲಾರಂಭಿಸಿದ. ಇಂದ್ರನಿಗೆ ಬೆದರಿಕೆ ಹಾಕಿ ಸ್ವರ್ಗಲೋಕವನ್ನು ಬಿಟ್ಟು ಹೋಗುವಂತೆ ಆಜ್ಞಾಪಿಸಿದ. ಇಂದ್ರಲೋಕಕ್ಕೇ ಬೆದರಿಕೆ ಇಟ್ಟ ಮಹಿಷನ ಅಟ್ಟಹಾಸದಿಂದ ಹೆದರಿದ ಇಂದ್ರ ಬ್ರಹ್ಮನಿಗೆ ತಿಳಿಸಲಾಗಿ ಅವರೆಲ್ಲರೂ ಕೈಲಾಸದಲ್ಲಿದ್ದ ಸಂಕಷ್ಟಹಾರಕ ಶಂಕರನ ಬಳಿಗೂ, ಜಗದ್ರಕ್ಷಕ ವಿಷ್ಣುವಿನ ಬಳಿಗೂ ಹೋದರು. ಮಹಿಷನ ಮೇಲೆ ಯುದ್ಧ ಮಾಡುವುದನ್ನು ಬಿಟ್ಟರೆ ಅನ್ಯ ಮಾರ್ಗವಿಲ್ಲವೆಂದು ದೇವತೆಗಳೆಲ್ಲಾ ಒಟ್ಟು ಸೇರಿ ನಿರ್ಧರಿಸಿದರು.

ದೇವ ದಾನವರಿಬ್ಬರಿಗೂ ಯುದ್ಧ ಪ್ರಾರಂಭವಾಯಿತು. ಮಹಿಷನ ಸೈನ್ಯಾಧಿಪತಿಗಳು ಒಬ್ಬರಾದಂತೆ ಒಬ್ಬರು ಹತರಾಗುತ್ತ ಬಂದರು. ಕೊನೆಗೆ ಮಹಿಷನೇ ಇಂದ್ರನ ಮೇಲೆ ಯುದ್ಧ ಪ್ರಾರಂಭಿಸಿದ. ಮಹಿಷಾಸುರ ತನ್ನ ಮಾಯಾಶಕ್ತಿಯಿಂದ ಹಲವಾರು ರೂಪ ಪಡೆದು ಇಂದ್ರನನ್ನು ದಿಗ್ಮೂಢನನ್ನಾಗಿ ಮಾಡಿದ. ಇದರಿಂದಾಗಿ ವಿಷ್ಣುವೇ ಯುದ್ಧಕ್ಕೆ ಬಂದ. ಮಹಿಷ ವಿಷ್ಣುವನ್ನು ಪ್ರಜ್ಞೆ ತಪ್ಪಿಸಿ ಬೀಳಿಸಿದ. ಕೊನೆಗೆ ಪರಮೇಶ್ವರನೇ ಯುದ್ಧಕ್ಕೆ ಬರಬೇಕಾಯಿತು.

ಈಶ್ವರ ಮತ್ತು ಪ್ರಜ್ಞೆಯಿಂದ ಎಚ್ಚರಗೊಂಡ ವಿಷ್ಣು ಇಬ್ಬರೂ ಯುದ್ಧಕ್ಕೆ ತೊಡಗಿದ್ದನ್ನು ಕಂಡ ಮಹಿಷ ಕೋಣನ ವೇಷ ಧರಿಸಿ ಹೋರಾಡಲಾರಂಭಿಸಿದ. ಮಹಿಷನ ಕೈ ಮೇಲಾಗಿ ದೇವತೆಗಳಿಗೆ ಸೋಲಾಯಿತು. ಮಹಿಷ ಇಂದ್ರಲೋಕವನ್ನು ತನ್ನ ವಶಕ್ಕೆ ತೆಗೆದುಕೊಂಡ.

ಸೋತ ದೇವತೆಗಳೆಲ್ಲ ಮತ್ತೆ ಬ್ರಹ್ಮನಿಗೆ ಮೊರೆ ಹೋಗಲಾಗಿ ಅವರೆಲ್ಲ ಸೇರಿ ಮತ್ತೆ ಶಂಕರನ ಬಳಿಗೆ, ನಂತರ ವಿಷ್ಣುವಿನ ಬಳಿಗೆ ತೆರಳಿದರು. ಮಹಿಷಾಸುರ ಪಡೆದಿರುವ ವರದಿಂದಾಗಿ ಯಾವ ಪುರುಷ ದೇವರೂ ಅವನನ್ನು ಸಂಹರಿಸಲು ಸಾಧ್ಯವಿಲ್ಲವಾದ ಕಾರಣ ಅವರೆಲ್ಲ ತಮ್ಮಲ್ಲಿರುವ ಶಕ್ತಿಯನ್ನು ಧಾರೆ ಎರೆದು ಓರ್ವ ಸ್ತ್ರೀ ದೇವತೆಯನ್ನು ಸೃಷ್ಟಿ ಮಾಡಿದಾಗ ಆ ಆದಿಶಕ್ತಿ ಮಾತ್ರ ಮಹಿಷನನ್ನು ವಧಿಸಲು ಸಾಧ್ಯವೆಂದು ಜಗದ್ರಕ್ಷಕ ಮಹಾವಿಷ್ಣು ತಿಳಿಸಿದ.

ಅದರಂತೆಯೇ ಬ್ರಹ್ಮ, ವಿಷ್ಣು ಮತ್ತು ಈಶ್ವರ ಸೇರಿದಂತೆ ಎಲ್ಲ ದೇವತೆಗಳೂ ತಮ್ಮ ಅಸ್ತ್ರಾಸ್ತ್ರಗಳನ್ನು ಧಾರೆ ಎರೆದರು. ವಿಷ್ಣು ತನ್ನ ಚಕ್ರವನ್ನೂ, ಈಶ್ವರನು ತನ್ನ ತ್ರಿಶೂಲವನ್ನೂ, ಇಂದ್ರನು ತನ್ನ ವಜ್ರಾಯುಧವನ್ನು, ಅಗ್ನಿಯು ತನ್ನ ಶೂಲವನ್ನೂ ದೇವಿಗೆ ಕೊಟ್ಟರು. ಅಗ್ನಿಯಿಂದ ಸ್ತ್ರೀ ದೇವತೆಯೊಂದು ಹೊರಬಂದಿತು.

ದೇವಾದಿ ದೇವತೆಗಳು ನೀಡಿದ ಧನಸ್ಸು, ಖಡ್ಗ, ಶಕ್ತಿ, ಬಾಣ, ಶೂಲ, ಗದೆ, ಶಂಖ, ಕುಂತಾಯುಧ, ತ್ರಿಶೂಲ, ಶಾರ್ಙ್ಗ ದಂಡ, ಪಾಶ, ಧ್ವಜ, ಮತ್ತು ಪದ್ಮ ಇತ್ಯಾದಿ ಆಯುಧಗಳನ್ನು ತನ್ನ ೧೮ ಕೈಗಳಲ್ಲಿ ಧರಿಸಿ ಸಿಂಹದ ಮೇಲೆ ಕುಳಿತು ಜಗತ್ಕಂಟಕನಾದ ಮಹಿಷಾಸುರನ ಮೇಲೆ ಶಕ್ತಿ ಸ್ವರೂಪಿಣಿ ಯುದ್ಧಕ್ಕೆ ನಿಂತಳು.

ಯುದ್ಧದಲ್ಲಿ ಮಹಿಷನ ಸೈನ್ಯದ ವಾಸ್ಕಳ, ದುರ್ಮುಖ, ತಾಮ್ರ, ಚಿಕ್ಶುರ, ವಿದಾಲಾಕ್ಷ. ಅಸಿಲೋಮ, ದುರ್ಧರ, ತ್ರಿನೇತ್ರ, ಹಾಗೂ ಅಂಧಕ ಹೆಸರಿನ ರಾಕ್ಷಸರು ದುರ್ಗೆಯ ಕೈಯಲ್ಲಿ ಹತರಾತರು. ಕೊನೆಗೆ ಮಹಿಷನೇ ದೇವಿಯ ಮೇಲೆ ಯುದ್ಧಕ್ಕೆ ಬಂದ. ಇಬ್ಬರಿಗೂ ಭೀಕರ ಯುದ್ಧ ಪ್ರಾರಂಭವಾಗಿ ಮಹಿಷಾಸುರ ಚಾಮುಂಡಿಯ ಸಿಂಹ ವಾಹನವನ್ನು ಕೊಂದುಹಾಕಲು ಪ್ರಯತ್ನಿಸಿದಾಗ ದುರ್ಗೆಯು ಕೋಪಗೊಂಡು ಮಹಿಷನನ್ನು ತನ್ನ ಪಾಶದಿಂದ ಕಟ್ಟಿಹಾಕಿದಳು.

ದುರ್ಗೆಯ ಕೈಯಿಂದ ಮೃತ್ಯುವನ್ನು ತಪ್ಪಿಸಿಕೊಳ್ಳಲು ಮಹಿಷನು ಹಲವಾರು ಮಾರುವೇಷಗಳನ್ನು ಹಾಕಿಕೊಂಡು ಯುದ್ಧಕ್ಕೆ ಬಂದ. ಮಹಿಷನಾಗಿ ವೇಷ ಬದಲಾಯಿಸಿದಾಗ ದುರ್ಗೆಯು ಜಿಗಿದು ಅವನ ತಲೆಯನ್ನು ತನ್ನ ಪಾದದಿಂದ ತುಳಿದಳು. ತನ್ನ ಶೂಲದಿಂದ ಅವನನ್ನು ತಿವಿದು ಹಾಕಿದಳು.

ಸಾಯುತ್ತಿರುವ ಮಹಿಷ ದೇಹದ ಅರ್ಧ ಭಾಗದಿಂದ ಮಹಿಷಾಸುರನ ಮಾನವ ರೂಪ ಹೊರಬಂದು ದುರ್ಗೆಯನ್ನು ಹತ್ಯೆಗೆಯ್ಯಲು ಪ್ರಯತ್ನಿಸಿದಾಗ ಚಾಮುಂಡಿಯು ತನ್ನ ಖಡ್ಗದಿಂದ

ಮಹಿಷಾಸುರನನ್ನು ಸಂಹರಿಸಿದಳು. ಭಯಭೀತರಾಗಿ ಕಾಳಗವನ್ನು ನೋಡುತ್ತಿದ್ದ ದೇವಾದಿ ದೇವತೆಗಳು ಹರ್ಷೋದ್ಗಾರ ಮಾಡಿ, ಜಗಜ್ಜನನಿಯಾದ ದುರ್ಗಾದೇವಿಯ ಸ್ತುತಿ ಮಾಡಿದರು.

ಮಹಿಷನನ್ನು ಸಂಹರಿಸಿದ ಚಾಮುಂಡೇಶ್ವರಿ ನಂತರ ಚಂಡ, ಮುಂಡ, ಶುಂಬ, ನಿಶುಂಬ ಇತ್ಯಾದಿ ರಾಕ್ಷಸರನ್ನು ಸಂಹಾರ ಮಾಡಿ ಶಾಂತಿ ನೆಲೆಸಿದಳು.

ಚಂಡ–ಮುಂಡಾಸುರರನ್ನು ಸಂಹರಿಸಿ 'ಚಾಮುಂಡಿ' ಎಂದೂ, ಮಹಿಷಾಸುರನನ್ನು ಕೊಂದು 'ಮಹಿಷಮರ್ಧಿನಿ' ಎಂದೂ ದುರ್ಗೆಯು ನಾಮಾಂಕಿತಳಾಗಿದ್ದಾಳೆ. ಮಹಿಷಾಸುರನನ್ನು ಸಂಹಾರ ಮಾಡಿದ ಈ ಶಕ್ತಿಸ್ವರೂಪಿಣಿಯೇ ಮಹಾಬಲಗಿರಿಯ (ಚಾಮುಂಡಿ ಬೆಟ್ಟ) ಮೇಲೆ ಚಾಮುಂಡಿಯಾಗಿ ನೆಲೆಸಿರುವುದು ಎನ್ನುತ್ತದೆ ಪುರಾಣ ಕಥೆ.

------

೭) ದುರ್ಗೆಯ ಹಲವು ರೂಪಗಳು

ತಾಯಿ ದುರ್ಗೆ ತನ್ನಲ್ಲಿನ ಪ್ರಭಾವದಿಂದಾಗಿ ಅತ್ಯಾಕರ್ಷದಿಂದ ಕೂಡಿದವಳಾಗಿಯೂ, ಆನಂದದಾಯಕವಾಗಿಯೂ ಕಾಣುತ್ತಾಳೆ. ತನ್ನ ವಿಶೇಷ ರೂಪದಲ್ಲಿ ಚಾಮುಂಡಿ ಒಂದೇ ವೇಳೆ ಉಗ್ರವಾಗಿಯೂ ಹಾಗೂ ದಯಾಮಯಿಯಾಗಿಯೂ ಕಾಣಿಸಿಕೊಳ್ಳುತ್ತಾಳೆ. ಆಧ್ಯಾತ್ಮಿಕ ಮಾರ್ಗ ತೋರುವ ಸಕಲ ಕಲಾತ್ಮಿಕೆಯಾಗಿ ಗೋಚರವಾಗುತ್ತಾಳೆ. ಅವಳು ಒಂಬತ್ತು ರೂಪಗಳಲ್ಲಿ 'ನವದುರ್ಗೆ' ಎಂದು ಪ್ರಸಿದ್ಧಳಾಗಿದ್ದಾಳೆ. ಪ್ರತಿಯೊಂದು ರೂಪವೂ ಬೇರೆ ಬೇರೆಯದ್ದಾಗಿದ್ದು, ಪ್ರತಿಯೊಂದಕ್ಕೂ ಮಹತ್ವವಿದೆ. ದುರ್ಗೆಯ ಒಂಬತ್ತು ರೂಪಗಳೆಂದರೆ:

ಶೈಲಪುತ್ರಿ : 'ಶೈಲಪುತ್ರಿ' ಹಿಮಾಚ್ಛಾದಿತ ಮೇರುಶಿಖರ ಹಿಮವರ್ತ್‌ನ ಪುತ್ರಿ. ಹಿಮಾಲಯ ಪರ್ವತದ ಪುತ್ರಿಯಾಗಿ ಪಾರ್ವತಿ ಒಂಬತ್ತು ರೂಪಗಳಲ್ಲಿ ಮೊದಲನೆಯವಳು. ಪಾರ್ವತಿ ಹಿಂದಿನ ಜನ್ಮದಲ್ಲಿ ಪ್ರಜಾಪತಿಯಾದ ದಕ್ಷನ ಪುತ್ರಿಯಾಗಿ ಜನಿಸಿದ್ದಳು. ಆಗ ಅವಳ ಹೆಸರು 'ಸತಿ ಭವಾನಿ'. ಅಂದರೆ ಶಿವನ ಅರ್ಧಾಂಗಿ. ಒಮ್ಮೆ ದಕ್ಷ ಮಹಾರಾಜ ಯಜ್ಞವೊಂದನ್ನು ವ್ಯವಸ್ಥೆ ಮಾಡಿದ್ದ. ಯಜ್ಞಕ್ಕೆ ಬರಲು ಪರಶಿವನಿಗೆ ಆಹ್ವಾನ ಕೊಡಲು ಮರೆತು ಹೋದ. ಸತಿಯ ಒತ್ತಾಯದಿಂದಾಗಿ ಈಶ್ವರ ಯಜ್ಞಕ್ಕೆ ಹಾಜರಾದ. ಕರೆಯದಿದ್ದರೂ ಬಂದ ಶಿವನನ್ನು ದಕ್ಷ ಹೀಯಾಳಿಸಿದ. ತನ್ನ ಪತಿಗಾದ ಅವಮಾನವನ್ನು ಸಹಿಸಲಾರದೆ ಸತಿ ಯಜ್ಞದ ಕುಂಡಕ್ಕೆ ಬಿದ್ದು ಅಗ್ನಿಯಲ್ಲಿ ಬೆಂದುಹೋದಳು. ಮುಂದಿನ ಜನ್ಮದಲ್ಲಿ ಅವಳು ಹಿಮವಂತನ ಪುತ್ರಿಯಾಗಿ ಜನಿಸಿ 'ಪಾರ್ವತಿ – ಹಿಮವತಿ' ಎನಿಸಿಕೊಂಡು ಶಿವನ ಕೈಹಿಡಿದಳು. ದೇವತೆಗಳು ಪಾರ್ವತಿಯ ಸ್ತುತಿಗೈದರು: "ನೀನೇ ಶಕ್ತ್ಯಾತ್ಮಿಕೆ. ಬ್ರಹ್ಮ, ವಿಷ್ಣು ಮತ್ತು ಈಶ್ವರರೂ ನಿನ್ನಿಂದ ಶಕ್ತಿ ಪಡೆಯುವವರಾಗಿದ್ದಾರೆ" ಎಂದು

ಅವಳನ್ನು ಸ್ತುತಿಸಿದರು. ನಂದಿಯ ಮೇಲೆ ಕುಳಿತಿರುವ ಪಾರ್ವತಿ ಒಂದು ಕೈಯಲ್ಲಿ ತ್ರಿಶೂಲ, ಮತ್ತೊಂದು ಕೈಯಲ್ಲಿ ಕಮಲವನ್ನು ಹಿಡಿದಿದ್ದು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರನ ಪ್ರತೀಕವಾಗಿದ್ದಾಳೆ.

ಬ್ರಹ್ಮಚಾರಿಣಿ : ದುರ್ಗೆಯ ಎರಡನೆಯ ಸ್ವರೂಪ 'ಬ್ರಹ್ಮಚಾರಿಣಿ.' ಬ್ರಹ್ಮನ ಆಚರಣೆಯಾದರೋ ಕಠಿಣ ಸನ್ಮಾರ್ಗಾಚರಣೆ ಮತ್ತು ತಪಸ್ಸು. ಇಲ್ಲಿ ಬ್ರಹ್ಮ ಎಂದರೆ 'ತಪ'. ತನ್ನ ಮಹಿಮೆ ಮತ್ತು ಅಪಾರ ಶಕ್ತಿಯಿಂದಾಗಿ ಬ್ರಹ್ಮಚಾರಿಣಿ ತನ್ನ ಭಕ್ತರಿಗೆ ಜ್ಞಾನದಾಯಿನಿಯಾಗಿದ್ದಾಳೆ. ಬಲಗೈಯಲ್ಲಿ ಮಾಲೆಯನ್ನೂ ಎಡಗೈಯಲ್ಲಿ ಪಾನಪಾತ್ರೆಯನ್ನೂ ಹಿಡಿದಿದ್ದು, ಬ್ರಹ್ಮಚಾರಿಣಿಯು ಪರಾಮನಂದದಿಂದ ಕೂಡಿದವಳಾಗಿ ತನ್ನ ಭಕ್ತರಿಗೆ ಶಾಂತಿ, ಸಮಾಧಾನ, ಸಂತೋಷ ಹಾಗೂ ಸಮೃದ್ಧಿ ನೀಡುವವಳಾಗಿದ್ದಾಳೆ. ಪುರಾಣ ಕಥೆಯ ಪ್ರಕಾರ ಹಿಮವಂತನ ಮಗಳಾದ ಪಾರ್ವತಿಯ ಬಳಿ ಒಂದು ದಿನ ನಾರದರು ಬಂದು, ಅವಳ ಹಸ್ತವನ್ನು ನೋಡಿ, ನೀನು ಓರ್ವ ದಿಗಂಬರನನ್ನು ಮದುವೆಯಾಗಿತ್ತೀಯೆ ಎಂದು ಭವಿಷ್ಯ ನುಡಿದರಂತೆ. ಪಾರ್ವತಿ ತನ್ನ ತಾಯಿ ಮೇನಕೆಯ ಬಳಿ ಹೋಗಿ ತಾನು 'ಶಂಬು'ವನ್ನೇ ಮದುವೆಯಾಗುವುದಾಗಿಯೂ, ಇಲ್ಲದಿದ್ದಲ್ಲಿ ಬ್ರಹ್ಮಚಾರಿಣಿಯಾಗಿಯೇ ಉಳಿಯುವುದಾಗಿ ಹೇಳಿ ತಪಸ್ಸಿಗೆ ಕೂತಳಂತೆ.

ಚಂದ್ರಘಂಟ : ಹಣೆಯ ಮಧ್ಯೆ ಅರ್ಧ ಚಂದ್ರಾಕೃತಿಯನ್ನು ಘಂಟಾಕಾರವಾಗಿ ಧರಿಸಿರುವುದರಿಂದ ದುರ್ಗೆಗೆ ಈ ಹೆಸರು ಬಂದಿದೆ. ಸೌಂದರ್ಯವತಿಯಾದ 'ಚಂದ್ರಘಂಟ' ಜಾಜ್ವಲ್ಯಮಯಿಯಾಗಿ ಸ್ವರ್ಣರೂಪದಲ್ಲಿ ಕಾಣಿಸುತ್ತಾಳೆ. ಹತ್ತು ಕೈಗಳು, ಮೂರು ಕಣ್ಣುಗಳು ಅವಳಿಗಿದ್ದು ಕೈಗಳಲ್ಲಿ ಶಸ್ತ್ರಗಳನ್ನು ಹಿಡಿದಿದ್ದಾಳೆ. ಧೈರ್ಯಶಾಲಿನಿಯಾಗಿ, ಶಕ್ತಿಶಾಲಿಯಾಗಿ ಅಸುರರನ್ನು ಎದುರಿಸಲು ಸಿಂಹದ ಮೇಲೆ ಸಿದ್ಧಗೊಂಡಿದಾಳೆ. ಅವಳ ಘಂಟಾನಾದ ಎಲ್ಲ ದಾನವರನ್ನು, ರಾಕ್ಷಸರನ್ನು ಬೆಚ್ಚಿಬೀಳಿಸುತ್ತಿದೆ.

ಕೂಷ್ಮಾಂಡ : ದುರ್ಗೆಯ ನಾಲ್ಕನೆ ರೂಪ 'ಕೂಷ್ಮಾಂಡ.' ಅವಳು ಕೂಷ್ಮಾಂಡಿನಿಯಾಗಿ ಹಿರಣ್ಯಗರ್ಭವನ್ನು ಕೈಯಲ್ಲಿ ಹಿಡಿದಿದ್ದು ಸೃಷ್ಟಿಕರ್ತೆಯೂ ಆಗಿದ್ದಾಳೆ. ಅವಳನ್ನು ಎಂಟು ಅಥವಾ ಹತ್ತು ಕೈಗಳಿಂದ ಸಾಮಾನ್ಯವಾಗಿ ತೋರಲಾಗುತ್ತದೆ. ಸಿಂಹದ ಮೇಲೆ ಕುಳಿತಿದ್ದು, ತನ್ನ ಕೈಗಳಲ್ಲಿ ಏಳು ರೂಪದ ಶಸ್ತ್ರಗಳು, ಜಪಮಾಲೆ, ಕಮಲ ಇತ್ಯಾದಿ ಹಿಡಿದಿದ್ದಾಳೆ. ಸೃಷ್ಟಿಯ ಮುನ್ನ ಇಡೀ ಜಗತ್ತು ಕತ್ತಲಿನಿಂದ ಕೂಡಿತ್ತು. ದುರ್ಗೆ ಈ ರೂಪದಲ್ಲಿ ಜಗಜ್ಜನನಿಯಾಗಿ ದಶದಿಕ್ಕುಗಳಿಗೂ ತನ್ನ ಪ್ರಕಾಶವನ್ನು ಬೀರುತ್ತಾ ಸೃಷ್ಟಿಕರ್ತೆಯ ಸ್ವರೂಪ ಪಡೆದಳು.

ಸ್ಕಂದಮಾತ : ದುರ್ಗೆಯ ಐದನೆಯ ಅವತಾರ 'ಸ್ಕಂದಮಾತ.' ಸ್ಕಂದಮಾತ ಎಂದರೆ ಸ್ಕಂದ ಅಥವಾ ಕಾರ್ತಿಕೇಯನ ತಾಯಿ. ಶಿವನನ್ನು ವರಿಸಿದ ಪಾರ್ವತಿ ಸ್ಕಂದನಿಗೆ ಜನ್ಮ ನೀಡಿದಳು. ದೇವತೆಗಳು ಸ್ಕಂದನನ್ನು ಅಸುರರ ಮೇಲಿನ ಯುದ್ಧದಲ್ಲಿ ತಮ್ಮ ಸೈನ್ಯದ ದಂಡನಾಯಕನನ್ನಾಗಿ

ನೇಮಿಸಿಕೊಂಡರು. ಬಿಳಿ ವರ್ಣದಿಂದ ಕೂಡಿರುವ ಸ್ಕಂದಮಾತ ದೇವಿಯು ನಾಲ್ಕು ಕೈಗಳು ಮತ್ತು ಮೂರು ಕಣ್ಣುಗಳನ್ನು ಪಡೆದಿದ್ದಾಳೆ. ಬಲಗೈಯಲ್ಲಿ ಶಿಶು ಸ್ಕಂದನನ್ನು ಹಿಡಿದಿದ್ದಾಳೆ. ಮತ್ತೊಂದು ಬಲಗೈಯಲ್ಲಿ ಕಮಲಧಾರಿಣಿಯಾಗಿದ್ದಾಳೆ. ಒಂದು ಎಡಗೈಯಲ್ಲಿ ಕಮಲವನ್ನು ಹಿಡಿದು ಮತ್ತೊಂದು ಎಡಗೈಯನ್ನು ವರಪ್ರದೆಯಾಗಿ ತೋರುತ್ತಾ ತನ್ನ ಭಕ್ತರಿಗೆ ಆಶೀರ್ವಾದ ಕರುಣಿಸುತ್ತಿದ್ದಾಳೆ. ಸ್ಕಂದಮಾತಾ ರೂಪದಲ್ಲಿ ಅವಳು ಕಮಲದ ಮೇಲೆ ಕುಳಿತಿರುವಂತೆ ಸಾಮಾನ್ಯವಾಗಿ ತೋರಲಾಗುತ್ತದೆ.

ಕಾತ್ಯಾಯನಿ : ಪೂರ್ವದಲ್ಲಿ 'ಕತ' ಎಂಬ ದೊಡ್ಡ ಮಹರ್ಷಿಯಿದ್ದ. ಪ್ರಖ್ಯಾತನಾಗಿದ್ದು, ಋಷಿಗಣದಲ್ಲಿ ಅವನು ಅಪಾರ ಗೌರವ ಪಡೆದಿದ್ದ. ತಾಯಿಯ ಸ್ವರೂಪದಲ್ಲಿ ಓರ್ವ ಪುತ್ರಿಯನ್ನು ಪಡೆಯಲು ಬಯಸಿದ ಅವನು ತಾಯಿ ದುರ್ಗೆಯ ಆಶೀರ್ವಾದ ಪಡೆಯಲು ಘೋರ ತಪಸ್ಸನ್ನು ಆಚರಿಸಿದ. ಅವನ ತಪಸ್ಸಿಗೆ ಮೆಚ್ಚಿದ ಪಾರ್ವತಿ ಅವನಿಗೆ 'ಕಾತ್ಯಾಯನಿ'ಯಾಗಿ ಜನಿಸಿದಳು. ಕತನ ಪುತ್ರಿಯಾಗಿ ಜನಿಸಿದ ಕಾರಣ ಅವಳಿಗೆ 'ಕಾತ್ಯಾಯನಿ' ಎಂದು ಹೆಸರು ಬಂದಿತು. ಕಾತ್ಯಾಯನಿ ಎಂಟು ಕೈಗಳು ಮತ್ತು ಮೂರು ಕಣ್ಣುಗಳನ್ನು ಪಡೆದಿದ್ದಾಳೆ. ಏಳು ಕೈಗಳಲ್ಲಿ ಶಸ್ತ್ರಗಳನ್ನೂ, ಮತ್ತೊಂದು ಕೈಯಲ್ಲಿ ಕಮಲವನ್ನೂ ಹಿಡಿದಿದ್ದಾಳೆ.

ಕಾಳರಾತ್ರಿ : ಹೆಸರೇ ಹೇಳುವಂತೆ ಕಪ್ಪುರಾತ್ರಿಯಲ್ಲಿ ಜನಿಸಿದ ಕಾಳರಾತ್ರಿಯ ಬಣ್ಣವೂ ಕಪ್ಪು. ಕೆದರಿದ ಕೂದಲು, ಪ್ರಜ್ವಲಿಸುವ ಮೂರು ಕಣ್ಣುಗಳು. ನಾಸಿಕದಿಂದ ಜ್ವಾಲೆಗಳು ಹೊರಬರುತ್ತಿವೆ. ಅವಳು ಹಾಕಿಕೊಂಡಿರುವ ಸ್ವರ್ಣಮಾಲೆ ಪ್ರಜ್ವಲಿಸುತ್ತಿದೆ. ಅವಳ ಬಲಗೈ ವರಪ್ರದೆಯಾಗಿದ್ದು ಮತ್ತೊಂದು ಕೈ ಮೇಲೆತ್ತಿದ್ದು ಅದು ಅಭಯ ಪ್ರದೆಯಾಗಿದೆ. ಒಂದು ಎಡಗೈಯಲ್ಲಿ ಉರಿಯುತ್ತಿರುವ ದೀಪವನ್ನು ಹಿಡಿದುಕೊಂಡಿದ್ದು, ಮತ್ತೊಂದರಲ್ಲಿ ಮೊನಚಾದ ಆಯುಧವನ್ನು ಹಿಡಿದಿದ್ದಾಳೆ. ಅವಳ ರೂಪ ಭಕ್ತರ ಎಲ್ಲ ಭೀತಿಗಳನ್ನು ಪರಿಹರಿಸುವಂತಿದೆ; ದೈತ್ಯರ ಕಾಟದಿಂದ ತಪ್ಪಿಸುವಂತಿದೆ. ಇದರಿಂದಾಗಿ ಅವಳನ್ನು 'ಶುಭಕರಿ' ಎಂದೂ ಕರೆಯಲಾಗುತ್ತದೆ.

ಮಹಾಗೌರಿ : 'ಮಹಾಗೌರಿ' ದುರ್ಗೆಯ ಎಂಟನೆಯ ಸ್ವರೂಪ. ಅವಳು ಶಾಂತ ಸ್ವರೂಪಿಣಿ ಮತ್ತು ಜ್ಞಾನಮನೋಹರಿ. ಅವಳ ಶಕ್ತಿ ವೈಫಲ್ಯರಹಿತವಾದದ್ದು, ಫಲಪ್ರದವಾದದ್ದು. ಅವಳನ್ನು ಆರಾಧಿಸುವ ಆರಾಧಕರ ಹಿಂದಿನ, ಈಗಿನ ಮತ್ತು ಮುಂದಿನ ಜನ್ಮಗಳ ಎಲ್ಲ ಪಾಪಗಳನ್ನು ತೊಡೆದುಹಾಕುವ ಶಕ್ತಿಯುಳ್ಳವಳು. ಹಿಮಾಲಯದ ಕಾಡುಗಳಲ್ಲಿ ಮಾಡಿದ ಕಠಿಣ ತಪಸ್ಸಿನ ಫಲವಾಗಿ ಅವಳ ಶರೀರ ಕಪ್ಪಿಟ್ಟಿತು. ಶಿವ ಗಂಗೆಯ ನೀರಿನಲ್ಲಿ ಅವಳ ಕಪ್ಪುವರ್ಣವನ್ನು ತೊಡೆದು ಹಾಕಿದ. ಅವಳು ಮತ್ತೆ ಜಾಜ್ವಲ್ಯ ರೂಪಕ್ಕೆ ಪರಿವರ್ತಿತಳಾದಳು. ಚಂದ್ರನಂತೆ, ಶಂಖದಂತೆ ಶ್ವೇತರೂಪ ಪಡೆದಳು. ಪ್ರಜ್ವಲಿಸುವ ಸುಂದರ ರೂಪ ಪಡೆದು 'ಮಹಾಗೌರಿ' ಎನ್ನಿಸಿಕೊಂಡಳು. ಗೌರಿ ದೇವಿಗೆ ಎಂಟು ವರ್ಷ. ಅವಳು ಸ್ವಚ್ಛ ಬಿಳಿವಸ್ತ್ರಗಳನ್ನು ಧರಿಸಿದ್ದಾಳೆ. ನಂದಿಯ ಮೇಲೆ ಕುಳಿತಿದ್ದು ಮೂರು ಕಣ್ಣುಗಳು, ನಾಲ್ಕು ಕೈಗಳನ್ನು ಹೊಂದಿದ್ದಾಳೆ. ಅವಳ ಒಂದು ಬಲಗೈ

ಅಭಯಮುದ್ರೆಯಲ್ಲಿದ್ದು ಇನ್ನೊಂದು ತ್ರಿಶೂಲಧಾರಿಯಾಗಿದೆ. ಒಂದು ಎಡಗೈಯಲ್ಲಿ 'ಡಮರು' ಹಿಡಿದಿದ್ದು ಮತ್ತೊಂದು ಕೈ ವರಪ್ರದಾನವಾಗಿದೆ.

ಸಿದ್ಧಿದಾತ್ರಿ : 'ಸಿದ್ಧಿದಾತ್ರಿ' ಕೊನೆಯ ಒಂಬತ್ತನೆಯ ಅವತಾರ. ತನ್ನನ್ನು ಅನನ್ಯ ಪೂಜಿಸುವವರಿಗೆ ಸಿದ್ಧಿಯನ್ನು ದಾತ್ರಿ ಎಂದರೆ ದಾನಿಸುವವಳು ಸಿದ್ಧಿದಾತ್ರಿ. ಸಂತುಷ್ಠೆಯಾಗಿ ಮನೋನ್ಮಯಿಯಾಗಿ ಕಾಣಿಸುವ ಅವಳು, ಮಹಾಮಾತೆಯಾಗಿ ಎಲ್ಲ ದೇವಸಮೂಹ, ಋಷಿಮುನಿಗಳು, ತಂತ್ರೋಪಾಸಕರು ಮತ್ತು ಭಕ್ತರನ್ನು ಸಲಹುವವಳಾಗಿದ್ದಾಳೆ. 'ಸಿದ್ಧಿ'ಯಲ್ಲಿ ಎಂಟು ಬಗೆ. ಅವೆಂದರೆ ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಕಾಮ್ಯ, ಲಿಶಿತ್ವ ಮತ್ತು ವಶಿತ್ವ. 'ದೇವಿ ಭಾಗವತ'ದ ಪ್ರಕಾರ ಶಿವನೂ ಕೂಡ ತಾಯಿಯನ್ನು ಅರ್ಚಿಸಿ, ಅವಳಿಂದ ಅಷ್ಟ ಸಿದ್ಧಿಗಳನ್ನೂ ಗಳಿಸಿದ. ಈಶ್ವರನಿಗೆ ಪಾರ್ವತಿಯು ನೀಡಿದ ಸಿದ್ಧಿಯಿಂದಾಗಿ ಶಿವನ ದೇಹದ ಅರ್ಧ ಭಾಗ ಸ್ತ್ರೀ ರೂಪ, ಉಳಿದರ್ಧ ಭಾಗ ಪುರುಷ ರೂಪವನ್ನು ಪಡೆಯಲಾಗಿ ಅವನು 'ಅರ್ಧನಾರೀಶ್ವರ' ಎನ್ನಿಸಿಕೊಂಡ. ಸ್ತ್ರೀರೂಪ ಪಾರ್ವತಿಯ ರೂಪ, ಪುರುಷ ರೂಪ ಶಿವನ ರೂಪ. ಹಸನ್ಮುಖಿಯಾದ ಸಿದ್ಧಿದಾತ್ರಿ ಸಿಂಹದ ಮೇಲೆ ಕುಳಿತಿದ್ದಾಳೆ. ಶಂಖ, ಚಕ್ರ, ಕಮಲ, ಗದಾಧಾರಿಯಾಗಿದ್ದಾಳೆ.

-----------

೮) ನವರಾತ್ರಿಯ ಹಿನ್ನೆಲೆ

ನವರಾತ್ರಿ ಮತ್ತು ವಿಜಯದಶಮಿ ಮೈಸೂರಿನ ಪ್ರಸಿದ್ಧ ಹಬ್ಬಗಳು. 'ದಸರಾ' ಎಂದೇ ಪ್ರಖ್ಯಾತಿಯಾಗಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ದಸರಾದ ಹತ್ತು ದಿನಗಳೂ ದುರ್ಗಾದೇವಿಗೆ ವಿಶೇಷ ಪೂಜೆಗಳು ಸಲ್ಲುತ್ತವೆ. ಮನೆಮನೆಗಳಲ್ಲಿ, ದೇವಸ್ಥಾನಗಳಲ್ಲಿ, ಮಠಮಂದಿರಗಳಲ್ಲಿ ಪೂಜಾದಿಗಳು ವಿಶೇಷವಾಗಿ ಜರುಗುತ್ತವೆ. ದಸರಾ ಹಬ್ಬವನ್ನು ಸಾಮಾನ್ಯವಾಗಿ ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಬರುವ ಆಶ್ವಯುಜ ಮಾಸದಲ್ಲಿ ಆಚರಿಸಲಾಗುತ್ತದೆ.

ನವರಾತ್ರಿ ನವದುರ್ಗೆಯರಿಗೆ ಸಲ್ಲುವ ವಿಶೇಷ ಹಬ್ಬವಾಗಿದ್ದು ಹಬ್ಬದ ಒಂಬತ್ತು ದಿನಗಳೂ ದುರ್ಗೆಯ ಒಂದೊಂದು ರೂಪವನ್ನು ಪ್ರತಿ ದಿನ ಅರ್ಚಿಸಲಾಗುವುದು. ಒಂಬತ್ತು ದಿನಗಳ ಪೂಜಾದಿಗಳು ಮುಗಿದ ನಂತರ ಹತ್ತನೆಯ ದಿನ ವಿಜಯ ದಶಮಿಯ ಆಚರಣೆ. ವಿಶೇಷ ಪೂಜೆಯ ನಂತರ ವಿಜಯ ದಶಮಿಯ ಉತ್ಸವಾಚರಣೆ. ಈ ಹತ್ತು ದಿನಗಳೂ ಅತಿ ಪವಿತ್ರದ ದಿನಗಳು. ಶುಭ ಕಾರ್ಯಾರಂಭಕ್ಕೆ ಪ್ರಶಸ್ತ್ಯ ದಿನಗಳು.

ದಸರಾ ಹಬ್ಬದ ಆಚರಣೆ ಪ್ರಾಚೀನ ಕಾಲದಿಂದ ನಡೆದು ಬಂದಿದೆ. ರಾಮಾಯಣ ಮತ್ತು ಮಹಾಭಾರತಗಳಲ್ಲಿಯೂ ಅದರ ಪ್ರಸ್ತಾಪವನ್ನು ಕಾಣಬಹುದು. ವಿಷ್ಣುವಿನ ಅವತಾರ ಸ್ವರೂಪಿಯಾದ ಶ್ರೀರಾಮ ದೇವಿಯನ್ನು ಅರ್ಚಿಸಿ ತನ್ನ ಆಯುಧಗಳನ್ನು ಹೊರತರುವುದರ ಮೂಲಕ ನವರಾತ್ರಿಯನ್ನು ಆಚರಿಸಿದ ಎನ್ನುತ್ತದೆ ರಾಮಾಯಣ. ಪಾಂಡವರು ತಮ್ಮ ಅಜ್ಞಾತವಾಸ ಮುಗಿಸಿ ಮುಚ್ಚಿಟ್ಟಿದ್ದ ತಮ್ಮ ಅಸ್ತ್ರಾಸ್ತ್ರಗಳನ್ನು ಹೊರತೆಗೆದು ಅದಕ್ಕೆ ಪೂಜಿಸಿದರು ಎನ್ನುತ್ತದೆ ಮಹಾಭಾರತ. ಇದುವೇ 'ಆಯುಧಪೂಜೆ'ಯಾಗಿ ಆಚರಣೆಯಲ್ಲಿದೆ.

ದಸರಾ ಹಬ್ಬಕ್ಕೆ ಚಾರಿತ್ರಿಕ ಹಿನ್ನೆಲೆಯನ್ನೂ ಗುರುತಿಸಬಹುದು. ೧೪ನೇ ಶತಮಾನದಲ್ಲಿ ವಿಜಯನಗರದ ರಾಜರು ಈ ಹಬ್ಬವನ್ನು ಅತಿ ವಿಜೃಂಭಣೆಯಿಂದ ಆಚರಿಸಿದ್ದಾರೆ. ಅದರ ಸಂಕೇತವಾಗಿ ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿನ ಪ್ರಸಿದ್ಧ ಐತಿಹಾಸಿಕ ಸ್ಥಳ 'ಹಂಪಿ'ಯಲ್ಲಿ ಇಂದಿಗೂ 'ಮಹಾನವಮಿ ದಿಬ್ಬ' ಒಂದು ಸ್ಮಾರಕವಾಗಿ ಉಳಿದಿದೆ.

ಮೈಸೂರು ಮಹಾರಾಜರುಗಳಿಗೆ ದಸರಾ ಉತ್ಸವಾಚರಣೆ ವಿಜಯನಗರದ ಅರಸರಿಂದ ಒಂದು ಕೊಡುಗೆಯಾಗಿ ಬಂದಿದೆ. ಅವರು ಅದನ್ನು ಮೊದಲಿನಿಂದಲೂ ಉತ್ಸಾಹ, ಸಂಭ್ರಮಗಳಿಂದ ಆಚರಿಸಿಕೊಂಡು ಬಂದಿದ್ದಾರೆ. ಇಂದಿಗೂ ಮೈಸೂರು ರಾಜವಂಶಸ್ಥರಾದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ದಸರಾ ಹಬ್ಬವನ್ನು ಹಿಂದಿನ ಧಾರ್ಮಿಕ ಪದ್ಧತಿಯಲ್ಲಿಯೇ ಅರಮನೆಯಲ್ಲಿ ಆಚರಿಸುತ್ತಿದ್ದಾರೆ. ಜೊತೆಗೆ ಕರ್ನಾಟಕ ಸರ್ಕಾರ ದಸರಾ ಹಬ್ಬವನ್ನು 'ನಾಡಹಬ್ಬ'ವನ್ನಾಗಿ ಆಚರಿಸುತ್ತಿದ್ದು, ಈ ಹತ್ತು ದಿನಗಳ ಹಬ್ಬಕ್ಕೆ ಇನ್ನಷ್ಟು ಮಹತ್ವವನ್ನು ನೀಡುತ್ತಾ ಬಂದಿದೆ.

-------------

೯) ನವರಾತ್ರಿ ಪೂಜಾದಿಗಳು

ಶರನ್ನವರಾತ್ರಿಯ ಒಂಬತ್ತು ದಿನಗಳು ಹಾಗೂ ವಿಜಯ ದಶಮಿಯ ಹತ್ತನೆಯ ದಿನ ಅತಿ ಪವಿತ್ರದ ದಿನಗಳಾಗಿದ್ದು, ತಾಯಿ ದೇವಿಯ ಆಶೀರ್ವಾದ ಪಡೆಯಲು ಅತಿ ಮಹತ್ವದ ದಿನಗಳಾಗಿವೆ. ಹೀಗಾಗಿ ಎಲ್ಲ ದೇವಾಲಯಗಳೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರನ್ನು ಆಕರ್ಷಿಸುತ್ತವೆ. ಆದರಲ್ಲಿಯೂ ದೇವಿಗೇ ಮುಡಿಪಾದ ದೇವಾಲಯಗಳಿಗೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ. ಅವುಗಳಲ್ಲಿ ಚಾಮುಂಡಿ ಬೆಟ್ಟದ ಮೇಲಿನ ಚಾಮುಂಡೇಶ್ವರಿ ಅತಿ ಮಹತ್ವದ್ದೆನಿಸಿಕೊಂಡಿದ್ದು, ದೇವಿಯ ದರ್ಶನಕ್ಕಾಗಿ ಸಹಸ್ರಾರು ಭಕ್ತಾದಿಗಳು ದೇಶದ ಹಲವಾರು ಭಾಗಗಳಿಂದ ಬರುತ್ತಾರೆ. ವಿಶೇಷ ಪೂಜೆಗಳಲ್ಲಿ ಶ್ರದ್ಧಾಭಕ್ತಿಯಿಂದ ಪಾಲ್ಗೊಳ್ಳುತ್ತಾರೆ.

ಮೈಸೂರಿನ ಸುಪ್ರಸಿದ್ಧ ದಸರಾ ಉತ್ಸವವು ಮೈಸೂರಿನ ಅಧಿದೇವತೆಯಾದ ಚಾಮುಂಡೇಶ್ವರಿಯ ಸನ್ನಿಧಿಯಲ್ಲಿಯೇ ಮೊದಲು ಪ್ರಾರಂಭವಾಗುತ್ತದೆ. ಚಾಮುಂಡೇಶ್ವರಿಗೆ ಪ್ರಥಮ ಪೂಜೆಯನ್ನು ಸಲ್ಲಿಸಿ ನವರಾತ್ರಿ ಉತ್ಸವವನ್ನು ಪ್ರಾರಂಭಿಸುವ ಪದ್ಧತಿ ಪ್ರತಿ ವರ್ಷವೂ ತಪ್ಪದೆ ನಡೆದುಕೊಂಡು ಬಂದಿದೆ. ಕರ್ನಾಟಕ ಸರ್ಕಾರವೂ ಈ ಕ್ರಮವನ್ನು ಪಾಲಿಸಿಕೊಂಡು ಬಂದು ಚಾಮುಂಡಿ ದೇವಿಗೆ ಪೂಜೆ ಸಲ್ಲಿಸಿದ ನಂತರ ದಸರಾ ಉತ್ಸವಾಚರಣೆಯನ್ನು ಪ್ರಾರಂಭಿಸುತ್ತಿದೆ.

ದೇವಾಲಯದಲ್ಲಿ ಪ್ರತಿನಿತ್ಯವೂ ಎರಡೂ ಕಾಲಗಳಲ್ಲಿಯೂ ಅಭಿಷೇಕ, ಪೂಜೆಗಳು ಆಗಮಶಾಸ್ತ್ರ ಸಂಪ್ರದಾಯಗಳಿಗೆ ಅನುಸಾರವಾಗಿ ಆಗಮಿಕ ಅರ್ಚಕರುಗಳಿಂದ ಯಥಾವಿಧಿಯಾಗಿ ಪೂಜಾದಿ ನಿತ್ಯಸೇವೆಗಳು, ವಿಶೇಷವಾದ ಉತ್ಸವಾದಿಗಳು ಶಾಸ್ತ್ರೋಕ್ತವಾಗಿ ನಡೆಯುತ್ತದೆ. ನವರಾತ್ರಿಯಲ್ಲಿ ಪೂಜಾದಿಗಳು 'ದೇವಿ ಭಾಗವತ'ದಲ್ಲಿ ವಿವರಿಸಿರುವ ಧಾರ್ಮಿಕ ವಿಧಿ ಪ್ರಕಾರವಾಗಿಯೇ ಜರುಗುತ್ತವೆ.

ನವರಾತ್ರಿಯ ಒಂಬತ್ತು ದಿನಗಳನ್ನು ಮೂರು ದಿನಗಳ ಮೂರು ಭಾಗಗಳನ್ನಾಗಿ ವಿಂಗಡಿಸಿ ಸಾಮಾನ್ಯವಾಗಿ ಪೂಜಾದಿಗಳು ಜರುಗುತ್ತವೆ. ಪ್ರತಿ ಮೂರು ದಿನಗಳಲ್ಲಿ ದೇವಿಯ ಒಂದೊಂದು ಸ್ವರೂಪಕ್ಕೆ ಪೂಜಾದಿಗಳು ಸಲ್ಲುತ್ತವೆ.

ಮೊದಲ ಭಾಗದ ಮೂರು ದಿನಗಳಲ್ಲಿ ಮಹಾಕಾಳಿಯ ಅವತಾರವನ್ನು ಪೂಜಿಸಲಾಗುವುದು. ದಾರಿದ್ರ್ಯ, ರೋಗ ಇತ್ಯಾದಿ ಅನಿಷ್ಟಗಳ ನಿವಾರಣೆಗಾಗಿ ಮಹಾಕಾಳಿಯನ್ನು ವಿಶೇಷವಾಗಿ ಅರ್ಚಿಸಲಾಗುವುದು. ಎರಡನೆಯ ಭಾಗದ ಮೂರು ದಿನಗಳಲ್ಲಿ ದೇವಿಯ ಮಹಾಲಕ್ಷ್ಮಿ ಸ್ವರೂಪಕ್ಕೆ ಪೂಜೆ ಸಲ್ಲಿಸಲಾಗುವುದು. ಸಂಪತ್ತು, ಸಂತೃಪ್ತಿ ಮತ್ತು ಶ್ರೇಯಸ್ಸಿಗಾಗಿ ಈ ಪೂಜೆಗಳು ಸಲ್ಲುತ್ತವೆ. ಮೂರನೆಯ ಭಾಗದ ಮೂರು ದಿನಗಳು ಮಹಾಸರಸ್ವತಿಗೆ ಸಲ್ಲುವ ಪೂಜಾ ದಿನಗಳು. ಸ್ವಚ್ಛ ಮನಸ್ಸು, ಜ್ಞಾನಾರ್ಜನೆ ಮತ್ತು ಆಧ್ಯಾತಿಕ ಮಹೋನ್ನತಿಗಾಗಿ ಪೂಜೆಗಳು ನಡೆಯುತ್ತವೆ. ದೇವಿಯ ಮೂರು ಪ್ರಮುಖ ಸ್ವರೂಪಗಳು ಶಿವಶಕ್ತಿ (ಮಹೇಶ್ವರಿ), ವೈಷ್ಣವಿ ಮತ್ತು ಬ್ರಾಹ್ಮಿ.

ನವರಾತ್ರಿಯ ಏಳನೆಯ ದಿನ, ಅಂದರೆ ಸಪ್ತಮಿಯಂದು ಜ್ಞಾನದೇವತೆಯಾದ ಮಹಾಸರಸ್ವತಿಯನ್ನು ಪೂಜಿಸಲಾಗುವುದು. ಅಂದು ಪುಸ್ತಕ, ತಾಳೆಗರಿ ಗ್ರಂಥಗಳು, ಲೇಖನ ಸಾಮಗ್ರಿಗಳನ್ನು ಪೂಜಿಸಲಾಗುವುದು. ಎಂಟನೆಯ ದಿನ 'ದುರ್ಗಾಷ್ಟಮಿ'. ಅಂದು ದೇವಿಯ ದುರ್ಗಾ ಸ್ವರೂಪಕ್ಕೆ ವಿಶೇಷ ಪೂಜೆಗಳು ಸಲ್ಲುತ್ತವೆ. ಒಂಬತ್ತನೆಯ ದಿನ ಮಹಾನವಮಿಯಂದು ಚಂಡಿ ಹೋಮವನ್ನು ನಡೆಸಲಾಗುವುದು. ಉದ್ಯೋಗದ ಸಲಕರಣೆಗಳಿಗೆ ಅಂದು ಪೂಜೆ ಸಲ್ಲುತ್ತದೆ. ಹತ್ತನೆಯ ದಿನ ಉತ್ಸವವನ್ನು ತೆಗೆದುಕೊಂಡು ಹೋಗಿ ಶಮೀವೃಕ್ಷವನ್ನು, ಅಂದರೆ ಬನ್ನಿವೃಕ್ಷವನ್ನು ಪೂಜಿಸಲಾಗುವುದು.

ಈ ರೀತಿ ದೇವಿಯ ಮೂರು ವಿಶೇಷ ಸ್ವರೂಪ ಶಕ್ತಿಗಳಿಗೆ ಮಹತ್ವವನ್ನು ನೀಡಿ ವಿಶೇಷ ಪೂಜೆಗಳನ್ನು ವಿಧಿವತ್ತಾಗಿ ನಡೆಸಲಾಗುವುದು.

ಈ ವಿಶೇಷ ಪೂಜೆಗಳಲ್ಲದೆ ವೇದಗಳ ಪಠಣ. ಸಂಗೀತೋತ್ಸವ ಕಾರ್ಯಕ್ರಮಗಳು ದಸರಾ ಹಬ್ಬದ ಅಂಗವಾಗಿ ಜರುಗುತ್ತವೆ.

-------

೧೦) ರಥೋತ್ಸವ ಮತ್ತು ತೆಪ್ಪೋತ್ಸವ

ದಸರಾ ಹಬ್ಬ ಮುಗಿದ ನಂತರ ಚಾಮುಂಡಿ ಬೆಟ್ಟದ ಮೇಲೆ ಚಾಮುಂಡೇಶ್ವರಿಯ ವಾರ್ಷಿಕ ಜಾತ್ರೆ ಪ್ರಾರಂಭವಾಗುತ್ತದೆ. ಆಗ ಬರುವ ಆಶ್ವಯುಜ ಪೌರ್ಣಮಿಯ ದಿನ ದೇವಿಯ ರಥೋತ್ಸವ ಜರುಗುತ್ತದೆ. ದೇವಿಯ ಸರ್ವಾಲಂಕೃತ ಉತ್ಸವಮೂರ್ತಿಯನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ದೇವಸ್ಥಾನಕ್ಕೆ ಕೊಡುಗೆಯಾಗಿ ಕೊಟ್ಟಿರುವ ಬೃಹತ್ ರಥದಲ್ಲಿಟ್ಟು ರಥೋತ್ಸವವನ್ನು ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ಮೈಸೂರಿನ ರಾಜವಂಶಸ್ಥರಾದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಹಾಜರಿದ್ದು ರಥವನ್ನು ಎಳೆಯುವುದರ ಮೂಲಕ ರಥೋತ್ಸವಕ್ಕೆ ಚಾಲನೆ ನೀಡುತ್ತಾರೆ. ರಥವನ್ನು ದೇವಸ್ಥಾನದ ಸುತ್ತ ಎಳೆದುಕೊಂಡು ಹೋಗಲಾಗುತ್ತದೆ. ರಥೋತ್ಸವವನ್ನು ವೀಕ್ಷಿಸಲು ಸಾವಿರಾರು ಜನ ಬರುತ್ತಾರೆ.

ರಥೋತ್ಸವದ ನಂತರ ತೆಪ್ಪೋತ್ಸವ ಏರ್ಪಾಡಾಗುತ್ತದೆ. ಚಾಮುಂಡೇಶ್ವರಿಯ ಉತ್ಸವಮೂರ್ತಿಯನ್ನು ಅಲಂಕೃತ ತೆಪ್ಪದಲ್ಲಿಟ್ಟು ದೇವೀಕೆರೆಯಲ್ಲಿ ತೆಪ್ಪೋತ್ಸವವನ್ನು ನಡೆಸಲಾಗುವುದು. ರಾತ್ರಿಯ ದೀಪಾಲಂಕರಗಳ ನಡುವೆ ಜರುಗುವ ಆಕರ್ಷಣೀಯ ತೆಪ್ಪೋತ್ಸವವನ್ನು ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ದೇವೀಕೆರೆಯ ಸುತ್ತ ನೆರೆದು ಉತ್ಸವವನ್ನು ವೀಕ್ಷಿಸುತ್ತಾರೆ.

ಈ ಎಲ್ಲ ಸಂದರ್ಭಗಳಲ್ಲಿ ಚಾಮುಂಡೇಶ್ವರಿ ದೇವಾಲಯವು ಅಲಂಕೃತಗೊಂಡಿರುತ್ತದೆ. ರಾತ್ರಿಯ ವೇಳೆ ದೀಪಾಲಂಕರದಿಂದ ಬೆಳಗುತ್ತಿರುತ್ತದೆ.

ಬೆಳಗಿನ ಮತ್ತು ಸಂಜೆಯ ಆಹ್ಲಾದಕಾರಿ ತಂಪು ಹವೆಯ ನಡುವೆ ತಾಯಿ ಚಾಮುಂಡೇಶ್ವರಿಯ ದರ್ಶನ ಮನಸ್ಸಿಗೆ ತೃಪ್ತಿ-ನೆಮ್ಮದಿಯನ್ನು ಉಂಟುಮಾಡುತ್ತದೆ.

--------

೧೧) ಮಹಾಬಲೇಶ್ವರ ದೇವಸ್ಥಾನ

ಚಾಮುಂಡೇಶ್ವರಿ ದೇವಸ್ಥಾನದ ದಕ್ಷಿಣ ಭಾಗದ ದಿಣ್ಣೆಯ ಮೇಲಿರುವ ಮಹಾಬಲೇಶ್ವರ ದೇವಸ್ಥಾನ ಬೆಟ್ಟದಲ್ಲಿನ ದೇವಾಲಯಗಳ ಪೈಕಿ ಅತಿ ಪ್ರಾಚೀನವಾದುದು. ಪುರಾಣ ಪ್ರಸಿದ್ಧವಾಗಿ ಈಶ್ವರನು ಸ್ವಯಂ ವ್ಯಕ್ತನಾದ ಪವಿತ್ರ ಸ್ಥಳ. ಚಾಮುಂಡೇಶ್ವರಿ ದೇವಸ್ಥಾನ ಹೆಚ್ಚು ಪ್ರವರ್ಧಮಾನಕ್ಕೆ ಬರುವ ಮುನ್ನ ಮಹಾಬಲೇಶ್ವರ ದೇವಸ್ಥಾನ ಬಹಳಷ್ಟು ಪ್ರಾಮುಖ್ಯತೆಯನ್ನು ಪಡೆದಿತ್ತು. ಯದು ವಂಶದ ದೊರೆಗಳು ಅಧಿಕಾರಕ್ಕೆ ಬಂದು ದೇವಿ ಆರಾಧನೆಗೆ ಹೆಚ್ಚು ಮಹತ್ವ ಕೊಟ್ಟ ಕಾರಣ ಚಾಮುಂಡೇಶ್ವರಿ ಹೆಚ್ಚು ಮನ್ನಣೆ–ಖ್ಯಾತಿ ಗಳಿಸಿತು.

ಮಹಾಬಲೇಶ್ವರ ದೇವಸ್ಥಾನಕ್ಕಿದ್ದ ಪ್ರಾಮುಖ್ಯತೆಯ ಕಾರಣ ಚಾಮುಂಡಿಬೆಟ್ಟವನ್ನು ಈ ಹಿಂದೆ 'ಮಹಾಬಲಾದ್ರಿ', 'ಮಹಾಬಲತೀರ್ಥ' ಎಂದು ಕರೆಯಲಾಗುತ್ತಿತ್ತು. 'ಮಹಾಬಲಗಿರಿ' ಪುರಾಣ, ಇತಿಹಾಸಗಳಲ್ಲಿ ಪ್ರಸಿದ್ಧವಾಗಿದೆ. ಇಲ್ಲಿನ ಮಹಾಬಲೇಶ್ವರ ದೇವಾಲಯದಲ್ಲಿ ಗೋಕರ್ಣಾಕಾರ ಲಿಂಗರೂಪಿ ಮಹಾಬಲೇಶ್ವರ ಸ್ವಾಮಿಯು ಸ್ವಯಂ ವ್ಯಕ್ತನಾಗಿ ನೆಲೆಸಿದ್ದಾನೆ ಎಂದು ಪುರಾಣಗಳು ಹೇಳುತ್ತವೆ. ಅನೇಕ ದೇವತೆಗಳೂ, ಋಷಿಗಳೇ ಮೊದಲಾದವರು ಮಹಾಬಲೇಶ್ವರ ಸ್ವಾಮಿಯನ್ನು ಆರಾಧಿಸಿ ಕೃತಕೃತ್ಯರಾಗಿರುವುದಾಗಿ ಪುರಾಣಗಳು ಪ್ರಸ್ತಾಪ ಮಾಡಿವೆ.

ಬೆಟ್ಟಕ್ಕೆ ಬರುವ ಹೆಚ್ಚಿನ ಯಾತ್ರಾರ್ಥಿಗಳು ಚಾಮುಂಡಿಯ ದರ್ಶನ ಮಾಡಿ ಹೊಗುತ್ತಾರೆ. ಮಹಾಬಲನ ಮಹತ್ವ ಅರಿಯದೆ, ದೇವಸ್ಥಾನದ ಪ್ರಾಮುಖ್ಯತೆ ತಿಳಿಯದೆ, ಮಹಾಬಲೇಶ್ವರನ ದರ್ಶನ ಮಾಡಿ ಹೋಗುವವರು ಬಹಳಷ್ಟು ಕಡಿಮೆ ಮಂದಿ.

ಎಂಟನೇ ಶತಮಾನದ ಗಂಗರ ಕಾಲದಲ್ಲಿ ನಿರ್ಮಿತವಾದದ್ದೆಂದು ಹೇಳಲಾದ ಈ ದೇವಾಲಯದ ಹೊರ ಪ್ರಾಕಾರದಲ್ಲಿ ಇರುವ ಗಣಪತಿ ವರಪ್ರದಾಯಕ ಎಂದೆನಿಸಿಕೊಂಡು ಪ್ರಸಿದ್ಧವಾಗಿದೆ. ಇದು ಹರಕೆ ಗಣಪತಿಯಾಗಿ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ವರಪ್ರಸಾದ ಮೂರ್ತಿ ಎಂದೆನೆಸಿಕೊಂಡಿದೆ. ದೇವಸ್ಥಾನದ ಮುಖ ಮಂಟಪ ೧೭ನೇ ಶತಮಾನದಲ್ಲಿ ನಿರ್ಮಿತವಾಗಿದೆ.

ಮಹಾಬಲೇಶ್ವರ ದೇವಸ್ಥಾನದ ಒಳಪ್ರಾಕಾರದ ಹಿಂಭಾಗದ ಪಶ್ಚಿಮ ಭಾಗದಲ್ಲಿರುವ ಕೈಸಾಲೆಯಲ್ಲಿ ಸದ್ಯೋಜ್ಯಾತ, ವಾಮದೇವ, ಅಘೋರ, ತತ್ಪುರುಷ ಹಾಗೂ ಈಷಾನಗಳೆಂಬ ಪಂಚಲಿಂಗಗಳಿವೆ. ವಾಯುವ್ಯ ದಿಕ್ಕಿನಲ್ಲಿ ದುರ್ಗಾದೇವಿಯ ಆಲಯವೂ, ದಕ್ಷಿಣ ದಿಕ್ಕಿನಲ್ಲಿ ದಕ್ಷಿಣಾಮೂರ್ತಿಯೂ, ಉತ್ತರದಿಕ್ಕಿನಲ್ಲಿ ಪಶ್ಚಿಮಾಭಿಮುಖವಾಗಿ ಚಂಡಿಕೇಶ್ವರನ ಮೂರ್ತಿಗಳೂ ಇವೆ. ನವರಂಗದಲ್ಲಿ ಗಣಪತಿ ಮತ್ತು ದ್ವಾರಪಾಲಕರುಗಳ ವಿಗ್ರಹಗಳಿವೆ. ಒಳಾಂಗಣದಲ್ಲಿ ಸಾಲು ವಿಗ್ರಹಗಳು, ಗಣಪತಿ, ಕ್ಷೇತ್ರಪಾಲ, ಸಪ್ತಮಾತೃಕೆ, ತಾಂಡವೇಶ್ವರ ಲಿಂಗಗಳೇ ಮೊದಲಾದ ವಿಗ್ರಹಗಳು ಸ್ಥಾಪಿಸಲ್ಪಟ್ಟಿವೆ.

ಇಲ್ಲಿನ ಅತ್ಯಂತ ಹಳೆಯ ಶಾಸನ ಕ್ರಿ.ಶ. ೯೫೦ ರ ಕಾಲಕ್ಕೆ ಸೇರಿದ್ದು ದೇವಸ್ಥಾನದ ಕೆಲವು ವಿಗ್ರಹಗಳು ಗಂಗರ ಕಾಲದಲ್ಲಿಯೇ ನಿರ್ಮಿತವಾಗಿದೆ. ಇಲ್ಲಿರುವ ವಿಷ್ಣುವಿನ ವಿಗ್ರಹ ಗಂಗರ ಕಾಲದ್ದೆಂದು ಹೇಳಲಾಗಿದೆ. ಕ್ರಿ.ಶ. ೧೧೨೮ ರಲ್ಲಿ ರಾಜ್ಯವಾಳುತ್ತಿದ್ದ ಹೊಯ್ಸಳರ ಪ್ರಸಿದ್ಧ ದೊರೆ ವಿಷ್ಣುವರ್ಧನನು ದೇವಸ್ಥಾನವನ್ನು ವಿಸ್ತೃತಗೊಳಿಸಿ ಕಾಣಿಕೆಗಳನ್ನು ಒಪ್ಪಿಸಿದ ಎನ್ನುತ್ತವೆ ಶಿಲಾಶಾಸನಗಳು. ದೇವಾಲಯದಲ್ಲಿನ ಅರ್ಧ ಮಂಟಪ ಮತ್ತು ನವರಂಗ ಹೊಯ್ಸಳರ ಕಾಲದ ಕೊಡುಗೆಯಾಗಿದ್ದು ಇವೆರಡೂ ಹೊಯ್ಸಳರ ಕಾಲದ ಪ್ರತೀಕವಾದ ಸುಂದರವಾಗಿ ಕಡೆದ ಶಿಲಾಕಂಬಗಳನ್ನು ಹೊಂದಿವೆ. ಇಲ್ಲಿನ ಸಪ್ತಮಾತೃಕೆ, ನಟರಾಜ, ಪಾರ್ವತಿ ಮತ್ತು ಭೈರವಿ ಮೂರ್ತಿಗಳು ಹೊಯ್ಸಳ ಕಾಲದ ವಿನ್ಯಾಸದಲ್ಲಿವೆ.

ದಕ್ಷಿಣಾಮೂರ್ತಿ ಮತ್ತು ಮಹಿಷಾಸುರ ಮರ್ಧಿನಿ ವಿಗ್ರಹಗಳ ಹಿಂಭಾಗದಲ್ಲಿನ ವಿನ್ಯಾಸ ಗಂಗರ ಕಾಲದ ಮಾದರಿ ಕಂಡುಬರುತ್ತದೆ. ದೇವಸ್ಥಾನದ ಹಿಂಬದಿಯ ಪ್ರಾಕಾರದಲ್ಲಿ ಇಂದ್ರ, ಭಿಕ್ಷಾಟನ ಶಿವ ಇತ್ಯಾದಿ ಮೂರ್ತಿಗಳಿದ್ದು, ಅವು ಚೋಳರ ಕಾಲದ ಶಿಲ್ಪಕಲೆಯನ್ನು ಸೂಚಿಸುತ್ತವೆ. ಗಂಗರ ಕಾಲದ ಬ್ರಹ್ಮನ ಮೂರ್ತಿಯೊಂದೂ ಇಲ್ಲಿ ಕಂಡುಬರುತ್ತದೆ.

ಒಟ್ಟಿನಲ್ಲಿ ಮಹಾಬಲೇಶ್ವರ ದೇವಸ್ಥಾನ ಮೂರು ರಾಜವಂಶಗಳಾದ ಗಂಗರು, ಚೋಳರು ಮತ್ತು ಹೊಯ್ಸಳರ ಶಿಲಾ ಕಾಣಿಕೆಯಿಂದ ವಿಶಿಷ್ಠವಾದದ್ದು ಎನಿಸಿಕೊಂಡಿದೆ. ಇದರಿಂದಾಗಿ ಇದು ಬೆಟ್ಟದ ಮೇಲಿನ ಅತಿ ಪ್ರಾಚೀನ ದೇವಸ್ಥಾನ ಎನ್ನಿಸಿಕೊಳ್ಳುತ್ತದೆ. ಜೊತೆಗೆ ಮೂರು ವಂಶಸ್ಥರ ಕಾಲದ ಶಿಲಾವಿನ್ಯಾಸಗಳ ದರ್ಶನವನ್ನು ಒಂದೇ ದೇವಸ್ಥಾನದಲ್ಲಿ ಪಡೆಯಬಹುದಾಗಿದೆ.

ಇಲ್ಲಿ ಪ್ರತಿದಿನ ಎರಡೂ ವೇಳೆಯಲ್ಲಿ ಪೂಜಾದಿಗಳು ಜರುಗುತ್ತವೆ. ವಿಶೇಷವಾಗಿ ಜ್ಯೇಷ್ಠ ಮಾಸದಲ್ಲಿ ಗಿರಿಜಾ ಕಲ್ಯಾಣವೂ, ಫಾಲ್ಗುಣ ಮಾಸದಲ್ಲಿ ರಥೋತ್ಸವವೂ, ಅಲ್ಲದೆ ಆರಿದ್ರೋತ್ಸವ, ಕೃತಿಕೋತ್ಸವ ಇತ್ಯಾದಿ ಉತ್ಸವಗಳು ನಡೆಯುತ್ತವೆ.

--------

೧೨) ನಾರಾಯಣಸ್ವಾಮಿ ದೇವಸ್ಥಾನ

ಚಾಮುಂಡೇಶ್ವರಿ ಮತ್ತು ಮಹಾಬಲೇಶ್ವರ ದೇವಸ್ಥಾನಗಳ ಬಳಿಯೇ ನಾರಾಯಣಸ್ವಾಮಿಯ ದೇವಸ್ಥಾನವಿದೆ. ಶ್ರೀದೇವಿ ಭೂದೇವಿ ಸಮೇತ ನಾರಾಯಣಸ್ವಾಮಿ ಇಲ್ಲಿ ವಿರಾಜಿಸುತ್ತಿದ್ದಾನೆ. ದೇವಸ್ಥಾನದ ಶಿಖರವು ಪುರಾತನವಾದದ್ದು. ದೇವಸ್ಥಾನದಲ್ಲಿ ಪಂಚಲೋಹದಿಂದ ಮಾಡಿದ ಸುಂದರವಾದ ಉಭಯನಾಚಾರ್ ಸಹಿತವಾದ ನಾರಾಯಣಸ್ವಾಮಿಯ ಉತ್ಸವಮೂರ್ತಿ ಆಕರ್ಷಣೀಯವಾಗಿದೆ. ಇದು ಉತ್ತರಾಭಿಮುಖವಾಗಿದೆ. ಇದಕ್ಕೆ ಎದುರಾಗಿ, ಅಂದರೆ

ದಕ್ಷಿಣಾಭಿಮುಖವಾಗಿ ರಾಮಾನುಜಾಚಾರ್ಯರು ಮತ್ತು ನಮ್ಮಾಳ್ವಾರ್ ಇವರುಗಳ ವಿಗ್ರಹಗಳಿವೆ. ದೇವಸ್ಥಾನದ ಬಲಭಾಗದಲ್ಲಿ ಪ್ರಾಕಾರದ ಈಶಾನ್ಯ ದಿಕ್ಕಿನಲ್ಲಿ ಸ್ವಯಂವ್ಯಕ್ತವಾದ ಆಂಜನೇಯ ವಿಗ್ರಹವಿದೆ. ನಾರಾಯಣಸ್ವಾಮಿ ದೇವಾಲಯದಲ್ಲಿಯೂ ವಿಶೇಷವಾಗಿ ಉತ್ಸವಾದಿಗಳು ಜರುಗುತ್ತವೆ.

---------

೧೩) ಮಹಿಷಾಸುರನ ವಿಗ್ರಹ

ಚಾಮುಂಡೇಶ್ವರಿ ದೇವಸ್ಥಾನಕ್ಕೆ ತೆರಳುವ ಮುನ್ನ ಮಹಿಷಾಸುರನ ವಿಗ್ರಹ ಕಣ್ಣಿಗೆ ಬೀಳುತ್ತದೆ. ಹದಿನಾರು ಅಡಿ ಎತ್ತರದ ಈ ವಿಗ್ರಹ ಗಾರೆಯಿಂದ ನಿರ್ಮಿತವಾಗಿದೆ. ಮಹಿಷಾಸುರ ಒಂದು ಕೈಯಲ್ಲಿ ಸರ್ಪವನ್ನೂ, ಮತ್ತೊಂದು ಕೈಯಲ್ಲಿ ದೊಡ್ಡದೊಂದು ಕತ್ತಿಯನ್ನೂ ಹಿಡಿದಿದ್ದಾನೆ. ಅವನ ಮೀಸೆ ವಿಶೇಷವಾಗಿ ಎದ್ದು ಕಾಣುತ್ತದೆ. ಮಹಿಷಾಸುರನ ವಿಗ್ರಹ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಿರ್ಮಿತವಾಗಿತ್ತು. ಗಾರೆಯದ್ದಾದ ಕಾರಣ ಅದು ಆಗಾಗ್ಗೆ ಶಿಥಿಲಗೊಳ್ಳುವುದರಿಂದ ಅದನ್ನು ರಿಪೇರಿ ಮಾಡಿ ನವೀಕರಿಸಲಾಗುತ್ತದೆ.

-------

೧೪) ನಂದಿ ವಿಗ್ರಹ

ಚಾಮುಂಡಿ ಬೆಟ್ಟಕ್ಕೆ ೧,೦೦೦ ಮೆಟ್ಟಿಲುಗಳಿದ್ದು, ಅದನ್ನು ಹತ್ತಿ ಹೋಗುವಾಗ ೮೦೦ನೇ ಮೆಟ್ಟಿಲಿನ ಬಳಿ ಬಸವನ ವಿಗ್ರಹವೊಂದು ಕಂಡು ಬರುತ್ತದೆ. ವೃಷಭ ಈಶ್ವರನ ವಾಹನ. ನಂದಿಯ ವಿಗ್ರಹವು ಕ್ರಿ.ಶ. ೧೬೫೯ರಲ್ಲಿ ನಿರ್ಮಾಣಗೊಂಡಿದ್ದು ಆಗ ಮೈಸೂರಿನ ಮಹಾರಾಜರಾಗಿದ್ದ ದೊಡ್ಡದೇವರಾಜ ಒಡೆಯರ ಕೊಡುಗೆಯಾಗಿದೆ.

ಏಕಶಿಲೆಯ ಈ ಸುಂದರ ವಿಗ್ರಹದ ಎತ್ತರ ೧೬ ಅಡಿ. ಗ್ರಾನೈಟ್ ಶಿಲೆಯಲ್ಲಿ ಇದನ್ನು ರೂಪಿಸಲಾಗಿದ್ದು ಇದು ಕಪ್ಪು ಬಣ್ಣದಲ್ಲಿದೆ. ಎಣ್ಣೆ ಇತ್ಯಾದಿಗಳ ಮಜ್ಜನದಿಂದ ಅದು ಕಪ್ಪುಬಣ್ಣ ಹೊಂದಿದ್ದು, ಅದರಿಂದ ವಿಗ್ರಹಕ್ಕೆ ಹೆಚ್ಚಿನ ಮೆರಗು ಬಂದಿದೆ. ಮುದ್ದು ರೂಪದ ಬಸವ ಉತ್ತಮ ಶಿಲ್ಪಕಲಾ ಸೌಂದರ್ಯದಿಂದ ಕೂಡಿದ್ದು ಆಕರ್ಷಕವಾಗಿದೆ. ಬಸವನ ಕತ್ತಿನ ಸುತ್ತ ಕೆತ್ತಿರುವ ವಿವಿಧ ಗಂಟೆಗಳ ಸರಪಳಿಗಳು ಅತ್ಯಾಕರ್ಷಕವಾಗಿದ್ದು ಖ್ಯಾತಿ ಗಳಿಸಿವೆ. ಕತ್ತಿನ ಬಳಿ ಲಿಂಗಾಕಾರದ ಸಣ್ಣ ಈಶ್ವರನ ವಿಗ್ರಹವಿದೆ.

ಮೈಸೂರಿನ ನಂದಿ ದಕ್ಷಿಣ ಭಾರತದಲ್ಲಿಯೇ ಎರಡನೆಯ ಅತಿ ಎತ್ತರದ ನಂದಿ ವಿಗ್ರಹವಾಗಿದೆ. ಕಾರ್ತಿಕ ಮಾಸದಲ್ಲಿ ವಿಶೇಷ ಪೂಜೆಗಳು ಸಲ್ಲುತ್ತವೆ. ಕೆಲ ವರ್ಷಗಳಿಂದ ದಸರಾ ಹಬ್ಬದ ಸಂದರ್ಭದಲ್ಲಿ ನಂದಿಗೆ ಅಭಿಷೇಕವನ್ನೂ ಸಾರ್ವಜನಿಕವಾಗಿ ಕೈಗೊಳ್ಳಲಾಗುತ್ತಿದೆ.

ಬೆಟ್ಟಕ್ಕೆ ಹತ್ತಿಹೋಗುವ ಮುನ್ನ ಸಿಗುವ ಕಿಬ್ಬಿಯ ಪಾದಗಳು ಇನ್ನೊಂದು ಪವಿತ್ರಸ್ಥಳವಾಗಿದೆ. ಬೆಟ್ಟವನ್ನು ಹತ್ತಿ ಹೋಗುವ ಮುನ್ನ ಭಕ್ತರು ಇಲ್ಲಿ ಪೂಜೆ ಸಲ್ಲಿಸಿ ಮುಂದೆ ಸಾಗುತ್ತಾರೆ. ಇದು ಚಾಮುಂಡೇಶ್ವರಿಯ ಪಾದಗಳು. ಪಾದದ ಬಳಿ ಚಾಮುಂಡೇಶ್ವರಿಯ ವಿಗ್ರಹ ಸ್ಥಾಪನೆಯಾಗಿದೆ.

--------

೧೫) ಇತರೆ ಮುಖ್ಯ ಸ್ಥಳಗಳು

ಚಾಮುಂಡಿ ಬೆಟ್ಟದ ಮೇಲೆ ಚಾಮುಂಡೇಶ್ವರಿ, ಮಹಬಲಾದ್ರಿ, ನಾರಾಯಣಸ್ವಾಮಿ ದೇವಾಲಯಗಳು, ಮಹಿಷಾಸುರ ಮತ್ತು ನಂದಿ ವಿಗ್ರಹಗಳಲ್ಲದೆ, ಇನ್ನೂ ಕೆಲ ಮುಖ್ಯ ಸ್ಥಳಗಳಿದ್ದು ಅವುಗಳ ಪೈಕಿ ಲಲಿತಾದ್ರಿ ಅರಮನೆ ಒಂದು. ಇದು ಮೈಸೂರು ಮಹಾರಾಜರ ವಂಶಸ್ಥರಿಗೆ ಸೇರಿದ್ದು ಹಿಂದೆ ಮಹಾರಾಜರು ಬೆಟ್ಟಕ್ಕೆ ಭೇಟಿ ನೀಡುತ್ತಿದ್ದ ಸಂದರ್ಭಗಳಲ್ಲಿ ಇಲ್ಲಿ ತಂಗುತ್ತಿದ್ದರು. ಶಿಖರದ ಮೇಲ್ಭಾಗದಲ್ಲಿರುವ ಅರಮನೆಯ ಬಳಿ ನಿಂತರೆ ಮೈಸೂರಿನ ವಿಹಂಗಮ ನೋಟ ಕಾಣಸಿಗುತ್ತದೆ. ಈ ಅರಮನೆ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕಟ್ಟಲ್ಪಟ್ಟಿದೆ.

ಚಾಮುಂಡೇಶ್ವರಿ ದೇವಸ್ಥಾನದ ದಕ್ಷಿಣ ಭಾಗದಲ್ಲಿ ಉತ್ತರಾಭಿಮುಖವಾಗಿ ಗ್ರಾಮ ದೇವತೆಯಾದ ಮಾರಮ್ಮನ ದೇವಸ್ಥಾನವಿದೆ. ಇಲ್ಲಿ ಪ್ರತಿ ವರ್ಷವೂ ಮಾಘ ಬಹುಳ ಮಾಸದಲ್ಲಿ ವಿಶೇಷ ಪೂಜೆಗಳು ಜರುಗುತ್ತವೆ. ಗ್ರಾಮಸ್ಥರಿಂದ ತಂಪು ತೋರಿಸುವ ಹಬ್ಬಗಳು ನಡೆಯುತ್ತವೆ.

ಬೆಟ್ಟದಿಂದ ಇಳಿದು ಬರುವಾಗ ದಾರಿಯಲ್ಲಿ ಆಂಜನೇಯನ ಸಣ್ಣ ಗುಡಿ ಇದೆ. ಇದು ದಾರಿಯ ಮಧ್ಯದಲ್ಲಿದ್ದು ಮೈಸೂರಿನ ಮಹಾರಾಜ ಚಾಮರಾಜ ಒಡೆಯರ್ ಅವರ ಕಾಲದಲ್ಲಿ ಮಂಟಪವನ್ನು ಕಟ್ಟಿಸಿದರೆಂದು ಹೇಳಲಾಗುತ್ತದೆ.

---------

೧೬) ಚಾಮುಂಡಿ ಬೆಟ್ಟಕ್ಕೆ ಸಂಪರ್ಕ ವ್ಯವಸ್ಥೆ

ಚಾಮುಂಡಿ ಬೆಟ್ಟಕ್ಕೆ ಹತ್ತಿಹೋಗಲು ೧,೦೦೦ ಕಲ್ಲಿನ ಮೆಟ್ಟಿಲುಗಳಿವೆ. ಈಗಿರುವ ವಾಹನ ಸಂಚಾರಕ್ಕೆ ಅನುಕೂಲವಾದ ರಸ್ತೆ ನಿರ್ಮಾಣಕ್ಕೆ ಮುನ್ನ ಬೆಟ್ಟಕ್ಕೆ ಹೋಗಲು ಇದೇ ಮುಖ್ಯ ಸಂಪರ್ಕವಾಗಿತ್ತು. ಆದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಮೋಟಾರ್ ವಾಹನಗಳಿಗೆ ಅನುಕೂಲವಾಗುವ ರಸ್ತೆಯು ನಿರ್ಮಾಣಗೊಂಡು ಅದೀಗ ಬೆಟ್ಟಕ್ಕೆ ಭೇಟಿ ನೀಡುವವರಿಗೆ ಮುಖ್ಯ ಮಾರ್ಗವಾಗಿದೆ. ಅಂತೆಯೇ ಬೆಟ್ಟದ ಹಿಂಬದಿಯಿಂದಲೂ, ಅಂದರೆ ನಂಜನಗೂಡಿನ ಕಡೆಯಿಂದಲೂ ಬೆಟ್ಟದ ಮೇಲಕ್ಕೆ ಹೋಗಲು ಕಲ್ಲಿನ ಮೆಟ್ಟಿಲು ಹಾಗೂ ರಸ್ತೆ

ಸೌಲಭ್ಯಗಳಿವೆ. ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿನ ಕಡೆಯಿಂದಲೇ ಜನರು ಬೆಟ್ಟಕ್ಕೆ ಬರುವುದರಿಂದ ಮೈಸೂರಿನಿಂದ ಬೆಟ್ಟಕ್ಕೆ ಬರುವ ರಸ್ತೆಯೇ ಹೆಚ್ಚು ಬಳಕೆಯಲ್ಲಿದೆ. ಈ ರಸ್ತೆಯನ್ನು ವಿಸ್ತಾರಗೊಳಿಸಿ ದೊಡ್ಡ ವಾಹನಗಳೂ ಸರಾಗವಾಗಿ ಬೆಟ್ಟದ ಮೇಲಕ್ಕೆ ಸಾಗಲು ಸೌಕರ್ಯ ಕಲ್ಪಿಸಲಾಗಿದೆ. ಕೆಲ ಭಕ್ತಾದಿಗಳು ಹಾಗೂ ಬೆಳಗಿನ ವೇಳೆ ವ್ಯಾಯಾಮ ಮಾಡುವ ಸಾಹಸಿಗರು ಇಂದಿಗೂ ಮೆಟ್ಟಿಲುಗಳನ್ನು ಬಳಸುತ್ತಾರೆ. ಮೆಟ್ಟಲಿನ ಮಾರ್ಗ ಮಧ್ಯೆ ಅಲ್ಲಲ್ಲಿ ಮಂಟಪಗಳು ನಿರ್ಮಾಣಗೊಂಡಿವೆ.

ಪ್ರವಾಸಿಗರು ಬೆಟ್ಟದ ಮೇಲಕ್ಕೆ ಬಂದು ಚಾಮುಂಡೇಶ್ವರಿಯ ದರ್ಶನ ಮಾಡಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಮಂಡಳಿ ಪ್ರತಿ ದಿನವೂ ಕಾಲಕಾಲಕ್ಕೆ ಬಸ್ ಸೌಕರ್ಯ ಏರ್ಪಡಿಸಿದೆ. ಬಸ್‌ಗಳು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಿಂದ ಹೊರಟು ದೇವಸ್ಥಾನದ ಬಳಿ ಇರುವ ಮಹಿಷಾಸುರನ ವಿಗ್ರಹದ ಬಳಿ ನಿಲ್ಲುತ್ತವೆ. ಚಾಮುಂಡೇಶ್ವರಿಯ ದರ್ಶನ ಮಾಡಿ ಪ್ರವಾಸಿಗರು ಇಲ್ಲಿಂದ ಮತ್ತೆ ಬಸ್‌ಗಳಲ್ಲಿ ಮೈಸೂರಿಗೆ ವಾಪಸ್ ಬರಬಹುದು. ಪ್ರವಾಸಿಗರು ತಮ್ಮ ಸ್ವಂತ ವಾಹನಗಳಲ್ಲಿಯೂ ಬೆಟ್ಟದ ಮೇಲಕ್ಕೆ ರಸ್ತೆಯ ಮೂಲಕ ಬರಬಹುದು.

--------

೧೭) ಚಾಮುಂಡೇಶ್ವರಿಯ ಪ್ರಮುಖ ಉತ್ಸವಗಳು

೧. ಶ್ರೀ ಚಾಮುಂಡೇಶ್ವರಿ ಅಮ್ಮನವರ ಜನ್ಮೋತ್ಸವ
೨. ಶ್ರೀ ಚಾಮುಂಡೇಶ್ವರಿ ಅಮ್ಮನವರ ರಥೋತ್ಸವ
೩. ಶ್ರೀ ಚಾಮುಂಡೇಶ್ವರಿ ಅಮ್ಮನವರ ತೆಪ್ಪೋತ್ಸವ
೪. ಶ್ರೀ ಚಾಮುಂಡೇಶ್ವರಿ ಅಮ್ಮನವರ ಶಯನೋತ್ಸವ
೫. ಶ್ರೀ ಚಾಮುಂಡೇಶ್ವರಿ ಅಮ್ಮನವರ ಮುಡಿ ಉತ್ಸವ
೬. ಶ್ರೀ ಚಾಮುಂಡೇಶ್ವರಿ ಅಮ್ಮನವರ ವಸಂತೋತ್ಸವ
೭. ಶ್ರೀ ಚಾಮುಂಡೇಶ್ವರಿ ಅಮ್ಮನವರ ಪ್ರಾಸಾದೋತ್ಸವ
೮. ಶ್ರೀ ಚಾಮುಂಡೇಶ್ವರಿ ಅಮ್ಮನವರ ಫಲಪೂರ್ಣಿಮಾ ಉತ್ಸವ
೯. ಶ್ರೀ ಚಾಮುಂಡೇಶ್ವರಿ ಅಮ್ಮನವರ ಶರನ್ನವರಾತ್ರಿ ಉತ್ಸವ
೧೦. ಶ್ರೀ ಚಾಮುಂಡೇಶ್ವರಿ ಅಮ್ಮನವರ ಕೃತ್ತಿಕೋತ್ಸವ
೧೧. ಶ್ರೀ ಚಾಮುಂಡೇಶ್ವರಿ ಅಮ್ಮನವರ ಕೋಠಾರೋತ್ಸವ
೧೨. ಶ್ರೀ ಚಾಮುಂಡೇಶ್ವರಿ ಅಮ್ಮನವರ ಜಾತ್ರೆ
೧೩. ಶ್ರೀ ಮಹಾಬಲೇಶ್ವರ ಗಿರಿಜಾ ಕಲ್ಯಾಣ ಮತ್ತು ರಥೋತ್ಸವ
೧೪. ಕನ್ನಾಕನ್ನಡಿ ಉತ್ಸವ

------

## ಪ್ರವಾಸಿ – ಸಾರ್ವಜನಿಕ ಸೌಲಭ್ಯಗಳು

ಭಕ್ತಾದಿಗಳು ಮತ್ತು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡುವುದನ್ನು ಮನಗಂಡು ಕರ್ನಾಟಕ ಸರ್ಕಾರ ಹಾಗೂ ಅದರ ಮುಜರಾಯಿ ಇಲಾಖೆ ಹಲವಾರು ಸೌಲಭ್ಯಗಳನ್ನು ಕಲ್ಪಿಸಿದೆ.

ಪ್ರವಾಸಿ ಮಂದಿರ:

ವಾಹನ ನಿಲ್ದಾಣ

ಫಲಪುಷ್ಪಗಳ ಮಾರಾಟ

ಕುಡಿಯುವ ನೀರಿನ ಸೌಲಭ್ಯ

ಸಾರ್ವಜನಿಕ ಶೌಚಾಲಯ

ಭಕ್ತಾದಿಗಳಿಗಾಗಿ ವಿವಿಧ ಸೇವೆಗಳು

ಸಂಪರ್ಕಿಸಬೇಕಾದ ವಿಳಾಸ:
--------

## ಮಹಿಷಾಸುರಮರ್ಧಿನಿ ಸ್ತೋತ್ರಂ

ಐ ಗಿರಿ ನಂದಿನಿ ನಂದಿತ ಮೇದಿನಿ ವಿಶ್ವವಿನೋದಿನಿ ನಂದನುತೇ
ಗಿರಿವರ ವಿಂಧ್ಯ ಶಿರೋಧಿನಿ ವಾಸಿನಿ ವಿಷ್ಣುವಿಲಾಸಿನಿ ಜಿಷ್ಣುನುತೇ
ಭಗವತಿ ಹೇ ಶಿತಿಕಂಠಕುಟುಂಬಿನಿ ಭೂರಿಕುಟುಂಬಿನಿ ಭೂರಿಕೃತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಸುರವರವರ್ಷಿಣಿ ದುರ್ಧರಧರ್ಷಿಣಿ ದುರ್ಮುಖಮರ್ಷಿಣಿ ಹರ್ಷರುತೇ
ತ್ರಿಭುವನಪೋಷಿಣಿ ಸಂಕಟರೋಷಿಣಿ ಕಿಲ್ಬಿಷಮೋಷಿಣಿ ಘೋಷರುತೇ

ದನುಜನಿರೋಷಿಣಿ ದಿತಿಸುತರೋಷಿಣಿ ದುರ್ಮದಶೋಷಿಣಿ ಸಿಂಧುಸುತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಐ ಜಗದಂಬ ಮದಂಬ ಕದಂಬ ವನಪ್ರಿಯವಾಸಿನಿ ಹಾಸರುತೇ
ಶಿಖಿರಿಶಿರೋಮಣಿ ತುಂಗಹಿಮಾಲಯ ಶೃಂಗನಿಜಾಲಯ ಮಧ್ಯಗತೇ
ಮಧುಮಧುರೇ ಮಧುಕೈಟ ಭಗಂಜಿನಿ ಕೈಟಭಭಂಜಿನಿ ರಾಸರುತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಐ ಶತಖಂಡ ವಿಖಂಡಿತರುಂಡ ವಿತುಂಡಿತಶುಂಡ ಗಜಾಧಿಪತೇ
ಋಪಗಜಗಂಡ ವಿದಾರಣಚಂಡ ಪರಾಕ್ರಮಶುಂಡ ಮೃಗಾಧಿಪತೇ
ನಿಜಭುಜದಂಡ ನಿಪಾತಿತಖಂಡ ವಿಪಾತಿತಮುಂಡ ಭಟಾಧಿಪತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಐ ರಣದುರ್ಮದ ಷಟ್ರುವಧೋದಿತ ದುರ್ಧರನಿರ್ಜರ ಶಕ್ತಿಭೃತೇ
ಚತುರವಿಚಾರಧುರೀಣಮಹಾಶಿವ ದೂತಕೃತ ಪ್ರಮತಾಧಿಪತೇ
ದುರಿತದುರೀಹದುರಾಶಯದುರ್ಮತಿ ದಾನವದೂತ ಕೃತಾಂತಮತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಐ ಶರಣಾಗತ ವೈರಿವಧೂವರ ವೀರವರಾಭಯ ದಾಯಕರೇ
ತ್ರಿಭುವನಮಸ್ತಕ ಶೂಲವಿರೋಧಿ ಶಿರೋಧಿಕೃತಾಮಲ ಶೂಲಕರೇ
ದುಮಿದುಮಿತಾಮರ ದುಂದುಭಿನಾದ ಮಹೋ ಮುಖರೀಕೃತ ತಿಗಮಕರೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಐ ನಿಜಹುಂಕೃತಿ ಮಾತ್ರನಿರಾಕೃತ ಧೂಮ್ರವಿಲೋಚನ ಧೂಮ್ರಶತೇ
ಸಮರವಿಶೋಶಿತ ಶೋಣಿತಬೀಜ ಸಮುದ್ಭವಶೋಣಿತ ಬೀಜಲತೇ
ಶಿವಶಿವಶುಂಭ ನಿಶುಂಭಮಹಾಹವತರ್ಪಿತ ಭೂತಪಿಶಾಚರತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಧನುರನುಸಂಗ ರಣಕ್ಷಣಸಂಗ ಪರಿಸ್ಫುರದಂಗ ನಟಕಟಕೇ
ಕನಕಪಿಶಂಗ ಪ್ರಿಷತ್ಕನಿಶಂಗ ರಸದ್ಭಟಶೃಂಗ ಹತಾಬಟುಕೇ
ಕೃತಚತುರಂಗ ಬಲಕ್ಷಿತಿರಂಗ ಘಟದ್ಬಹುರಂಗ ರಟದ್ಬಟುಕೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಜಯ ಜಯ ಜಪ್ಯಜಯೇ ಜಯಶಬ್ದ ಪರಸ್ತುತಿತತ್ಪರ ವಿಶ್ವನುತೇ
ಝಣ ಝಣ ಝಿಂಝಿಮಿ ಝಿಂಕೃತನೂಪುರ ಸಿಂಜಿತಮೋಹಿತ ಭೂತಪತೇ
ನಟಿತ ನಟಾರ್ಧನಟೀನಟನಾಯಕ ನಟೀತನಾಟ್ಯಸುಗಾನರತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಐ ಸುಮನ: ಸುಮನ: ಸುಮನ: ಸುಮನ: ಸುಮನೋಹರಕಾಂತಿಯುತೇ
ಶ್ರಿತ ರಜನೀ ರಜನೀ ರಜನೀ ರಜನೀ ರಜನೀಕರವಕ್ರವೃತೇ
ಸುನಯನವಿಭ್ರ ಮರಭ್ರ ಮರಭ್ರ ಮರಭ್ರ ಮರಭ್ರ ಮರಾಧಿಪತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಸಹಿತಮಹಾಹವ ಮಲ್ಲಮತಲ್ಲಿಕ ಮಲ್ಲಿತರಲ್ಲಕ ಮಲ್ಲರತೇ
ವಿರಚಿತವಲ್ಲಿಕ ಪಲ್ಲಿಕಮಲ್ಲಿಕ ಶ್ರಿಲ್ಲಿಕಭಿಲ್ಲಿಕ ವರ್ಗವೃತೇ
ಸಿತ ಕೃತ ಫುಲ್ಲಿಸಮುಲ್ಲಸಿತಾಕೃಣತಲ್ಲಜ ಪಲ್ಲವಸಲ್ಲಲಿತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಅವಿರಲಗಂಡ ಗಲನ್ಮದಮೇದುರ ಮತ್ತಮತಂಗಜ ರಾಜಪತೇ
ತ್ರಿಭುವನ ಭೂಷಣ ಭೂತಕಲಾನಿಧಿ ರೂಪಪಯೋನಿಧಿ ರಾಜಸುತೇ
ಐ ಉದತೀಜನ ಲಾಲಸಮಾನಸ ಮೋಹನಮನ್ಮಥ ರಾಜಸುತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಕಮಲದಲಾಮಲಕೋಮಲ ಕಾಂತಿಕಲಾಕಲಿತಾಮಲ ಭಾಲಲತೇ
ಸಕಲವಿಲಾಸಕಲಾನಿಲಯಕ್ರಮ ಕೇಲಿಚಲಾತ್ಕಲ ಹಂಸಕುಲೇ
ಅಲಿಕುಲಸಂಕುಲ ಕುವಲಯಮಂಡಲ ಮೌಲಿಮಿಲಾದ್ಬಕುಲಾಲಿಕುಲೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಕರಮುರಲೀರವ ವೀಜಿತ ಕೂಜಿತ ಲಜ್ಜಿತ ಕೋಕಿಲ ಮಂಜುಮತೇ
ಮಿಲಿತಪುಲಿಂದ ಮನೋಹರಗುಂಜಿತ ರಂಜಿತಶೈಲ ನಿಕುಂಜಗತೇ
ನಿಜಗುಣಭೂತ ಮಹಾಶಬರೀಗಣ ಸದ್ಗುಣಸಂಭೃತ ಕೇಲಿಲತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಕಟಿತಟಪೀಟದುಕೂಲವಿಚಿತ್ರ ಮಯೂಖಟಿರಸ್ಕೃತ ಚಂದ್ರರುಚೇ
ಪ್ರಣತಸುರಾಸುರ ಮೌಲಿಮಣಿಸ್ಫುರ ದಂಶುಲಸನ್ನಖ ಚಂದ್ರರುಚೇ
ಜಿತಕನಕಾಚಲ ಮೌಲಿಪದೋರ್ಜಿತ ನಿರ್ಭರಕುಂಜರ ಕುಂಭಕುಚೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ವಿಜಿತಸಹಸ್ರ ಕರೈಕಸಹಸ್ರ ಕರೈಕಸಹಸ್ರ ಕರೈಕನುತೇ
ಕೃತಸುರತಾರಕ ಸಂಗರತಾರಕ ಸಂಗರತಾರಕ ಸೂನುಸುತೇ
ಸುರಥಸಮಾಧಿ ಸಮಾನಸಮಾಧಿ ಸಮಾಧಿ ಸಮಾಧಿ ಸುಜಾತರತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಪದಕಮಲಂ ಕರುಣಾನಿಲಯೇ ವರಿವಸ್ಯತಿ ಯೋನುದಿನಂ ಸಶಿವೇ
ಐ ಕಮಲೇ ಕಮಲಾನಿಲಯೇ ಕಮಲಾನಿಲಯ: ಸಕಥಂ ನೇ ಭವೇತ್
ತವ ಪದಮೇವ ಪರಂ ಪದಮಿತ್ಯನುಶೀಲಯತೋ ಮಮ ಕಿಂ ನ ಶಿವೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಕನಕಲಸತ್ಕಲ ಸಿಂಧುಜಲೈರನುಸಿಂಚಿನುತೇ ಗುಣರಂಗಭುವಂ
ಭಜತಿ ಸ ಕಿಂ ನ ಸಚಿಕುಚಕುಂಭ ತಟೀಪರಿರಂಭ ಸುಖಾನುಭವಂ
ತವ ಚರಣಂ ಶರಣಂ ಕರವಾಣಿ ನತಾಮರವಾಣಿ ನಿವಾಸಿಶಿವಂ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ತವ ವಿಮಲೇಂದುಕುಲಂ ವದನೇಂದು ಅಲಂ ಸಕಲಂ ನನು ಕೂಲಯತೇ
ಕಿಮು ಪುರೂಹೂತ ಪುರೀಂದುಮುಖೀಸುಮುಖೀಭಿರಸೌ ವಿಮುಖೀಕ್ರಿಯತೇ
ಮಮ ತು ಮತಂ ಶಿವನಾಮಧನೇ ಭವತೀ ಕೃಪಯಾ ಕಿಮುತ ಕ್ರಿಯತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ

ಐ ಮಯಿ ದೀನದಯಾಲುತಯಾ ಕೃಪಯೈವ ತ್ವಯಾ ಭವಿತವ್ಯಮುಮೇ
ಐ ಜಗತೋ ಜನನೀ ಕೃಪಯಾಸಿ ಯಥಾಸಿ ತಥಾನುಮಿತಾಸಿತರೇ
ಯದುಚಿತಮತ್ರ ಭವತ್ಯುರರೀಕೃತಾದುರುತಾಪ ಮಪಾಕೃರುತೇ
ಜಯ ಜಯ ಹೇ ಮಹಿಷಾಸುರಮರ್ಧಿನಿ ರಮ್ಯಕಪರ್ದಿನಿ ಶೈಲಸುತೇ
-----

**ಮಹಿಷಮರ್ಧಿನಿ ಸ್ತೋತ್ರ**

**ದೇವ ಉವಾಚ:**

ಅಥಾಮರಾಮಹೇಶ್ವರೀಂ ದದರ್ಶ ಶೈಲ ಮಧ್ಯಗಾಂ
ನತಾಸ್ಮಯೋಗಿ ಸಂಸ್ತುತಾಮನಾದಿ ಮದ್ರಿಜಾಮಿಮಾಂ
ಹಿರಣ್ಮಯೇತಿ ನಿರ್ಮಲೇ ವರಾಸನೇ ಚಸುಸ್ಥಿತಾಂ
ನತಾಸ್ಮತಾಂ ಗುಣಾತಿಗಾಮಶೇಷ ದೋಷವರ್ಜಿತಾಂ
ನವೋದೇವೀ ಮಹಾಭಾಗೇಗಂಭೀರೆ ಭೀಮದರ್ಶನೆ
ಜಯಸ್ಥೇಸ್ಥಿತಿ ವಿದ್ಯಾಂತೇ ತ್ರಿನೇತ್ರೇ ವಿಶ್ವತೋಮುಖಿ
ವಿದ್ಯಾವಿದ್ಯೇ ಜಯೇಜಾಪ್ಯೆ ಮಹಿಷಾಸುರ ಮರ್ಧಿನಿ
ಸರ್ವಗೇ ಸರ್ವದೇವೇಶಿ ವಿಶ್ವರೂಪಿಣಿ ವೈಷ್ಣವೀ
ವೀತಶೋಕೆ ಧ್ರುವೇದೇವೀ ಪದ್ಮಪತ್ರ ಶುಭೇಕ್ಷಣೇ
ಶುದ್ಧಸತ್ವ ವ್ರತಸ್ವೇಚ ಚಂಡರೂಪೇ ವಿಭಾವರೀ
ಬುದ್ಧಿಸಿದ್ಧಿ ಪ್ರದೇದೇವೀ ವಿದ್ಯೇವಿದ್ಯೇಮೃತೇಶುಭೆ
ಶಾಂಕರೀ ವೈಷ್ಣವೀ ಬ್ರಾಹ್ಮೀ ಸರ್ವದೇವ ನಮಸ್ಕೃತೇ
ಘಂಟಾಹಸ್ತೆ ತ್ರಿಶೂಲಾಸ್ತ್ರೆ ಮಹಾಮಹಿಷ ಮರ್ಧಿನೀ
ಉಗ್ರರೂಪೇ ವಿರೂಪಾಕ್ಷೀ ಮಹಾಮಾಯೇ ಮೃತಸ್ರವೇ
ಸರ್ವಸತ್ವಹಿತೇದೇವೀ ಸರ್ವಸತ್ವಮಯೇಧ್ರುವೇ
ವಿದ್ಯಾಪುರಾಣಶಿಲ್ಪಾನಾಂ ಜನನೀ ಭೂತಧಾರಿಣೀ
ಸರ್ವವೇದ ರಹಸ್ಯಾನಾಂ ಸರ್ವಸತ್ಯವತಾಂ ಶುಭೇ
ತ್ವಮೇವ ಶರಣಂ ದೇವೀ ವಿದ್ಯೇವಿದ್ಯೇ ಶ್ರೀಯಂಬಿಕೇ
ವಿರೂಪಾಕ್ಷೀ ತಥಾಕ್ಷಾಂತೀ ಕ್ಷೋಭಿತಾಂತರ್ಜಲೇಮಲೇ
ನವೋಸ್ತುತೇ ಮಹಾದೇವೀ ನಮಸ್ತೆ ಪರಮೇಶ್ವರೀ
ನತೇಷಾಂಜಾಯತೇ ಕಿಂಚಿದಶುಭಂ ರಣಸಂಕಟೇ
ಯಶ್ವವ್ಯಾಪ್ರಭಯೇ ಘೋರೇಚೋರ ರಾಜಭಯೇತ ಥಾ
ಸ್ತವಮೊನಂ ಸದಾದೇವಿ ಪಠಿಷ್ಯತಿ ಯತಾತ್ಮವಾನ್
ನಿಗೂಢಸ್ಥೋಪೀಯೋ ದೇವೀತ್ವಾಂ ಸ್ಮರಿಷ್ಯತಿ ಮಾನವ:
ಸೋಪಿಬಂಧೈರ್ವಿನಿರ್ಮುಕ್ತ: ಸಸುಖಾವಸತೇಸುಖಿ

**ವರಾಹ ಉವಾಚ:**

ಏವಂಸ್ತುತಾ ತದಾದೇವೀ ದೇವೈ: ಪ್ರಣತಿಪೂರ್ವಕಂ

ಉವಾಚದೇವಾನ್ ಸಂಶ್ರೋಣಿ ವೃಣುಧ್ವಂ ವರಮುತ್ತಮಂ

**ದೇವ ಉವಾಚ**
ದೇವೀಸ್ತೋತ್ರಮಿದಂಯೋಹಿ ಪಠಿಷ್ಯತಿವಾನಘೆ
ಸರ್ವಕಾಮ ಸಮೋಪನ್ನಾನ್ ಕುರುದೇವಿ ಸದಾನರಾ:
ಅತ್ರಸ್ಥಿತಾಂ ತ್ವಾಂ ದೇವೇಶೀ ಯೇಽರ್ಚಯಂತಿ ಸದಾನರಾ:
ತೇಯೊಂತು ಪರಮಂಸ್ಥಾನಂ ಯೋಗಿನಾಮಹಿ ದುರ್ಲಭಂ

**ದೇವ್ಯುವಾಚ**
ಏವಮಸ್ತ್ವಿತಿತಾನ್ ದೇವಾನುಕ್ತ್ವಾದೇವೀ ಪರಾಪರಾ
ಇತಃ ಪರಂಜನಿಷ್ಯಂತಿ ನಿಶುಂಭಾದ್ಯಾ ಮಹಾಸುರಾ:
ತಾನ್ ಸರ್ವಾನ್ಸಂಹರಿಷ್ಯಾಮಿ ದುಷ್ಟದೈತ್ಯಾನ್ ಮಹಾಹವೆ
ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ದೇವತಾ:
ತದಾ ತದಾವತೀರ್ಯೋಽಹಂ ಕರಿಷ್ಯ ಧರ್ಮಪಾಲನಂ
ಅಶ್ವಿನಸ್ಸಸಿತೇಪಕ್ಷೆ ಸಪ್ತಮ್ಯಾಂ ತುದ್ವಿಜೋತ್ತಮ:
ಅತ್ರೋಪೊಷ್ಯ ಸ್ವಯಂ ಭಕ್ತ್ಯಾದತ್ವಾದೀಪಂ ಘೃತೇನತು
ರಾತ್ರೌಮದ್ದರ್ಶನಂಕೃತ್ವಾ ಸರ್ವಪಾಪೈ: ಪ್ರಮುಚ್ಯತೇ
ಅಶ್ವಿನಸ್ಯಸಿತೇಪಕ್ಷೆ ಪ್ರಾತ:ಸ್ನಾತ್ವಾ ದ್ವಿಜೋತ್ತಮ:
ಯಃ ಪಠಿಷ್ಯತಿಮಹಾತ್ಯಂ ಭಕ್ತಿಶ್ರದ್ಧಾ ಸಮನ್ವಿತ:
ಕಾಂಚನೇನ ವಿಮಾನೇನ ಕಿಂಕಿಣೀ ಜಾಲಮಾಲಿನಾ
ಸರ್ವಾಭರಣ ಸಂಯುಕ್ತ: ಸರ್ವದೇವ ನಮಸ್ಕೃತ:
ಗತ್ವಾರುದ್ರಪುರಂರಮ್ಯಂ ರುದ್ರೇಣ ಸಹಮೋದತೆ
ಸರ್ವತ್ರ ಸರ್ವದಿವಸೇ ಸ್ನಾನಂಮಾತ್ರಂ ಸಮಾಚರೇತ್
ಆ ಜನ್ಮಜನಿತ್ಯೇ:ಪಾಪೈ: ಮುಚ್ಯತೇನಾತ್ರಸಂಶಯ:
ವಿಸಸರ್ಜ ತತೋದೇವಾನ್ ಸ್ವಯಂ ತತ್ರೈವಸಂಸ್ಥಿತಾ
(ಇತಿ ಶ್ರೀವರಾಹ ಪುರಾಣೇ ಮಹಾಬಲಾಚಲಸ್ಥ ದೇವಿ ಮಹಾತ್ಮೆ
ಬ್ರಹ್ಮಾದಿ ದೇವಕೃತ ಮಹಿಷಾಸುರಮರ್ಧಿನೀ ಸ್ತೋತ್ರಂ ಸಂಪೂರ್ಣಂ)
--------

**ಶ್ರೀದುರ್ಗಾಸ್ತೋತ್ರಂ**

ಚಂಡಿಕಾಂ ಪೂಜಯಿತ್ವಾತು ಪ್ರಹೃಷ್ಟೇನಾಂತರಾತ್ಮನಾ

ಕೃತಾಂಜಲಿ ಪುಟೋಭೂತ್ವಾ ಇದಂ ಸ್ತೋತ್ರಮುದೀರಯೇತ್
ದುರ್ಗಾಂಶಿವಾಂ ಶಾಂತಿಕರೀಂ ಬ್ರಹ್ಮಾಣೀಂ ಬ್ರಹ್ಮಣ:ಪ್ರಿಯಾಮ್
ಸರ್ವಲೋಕಪ್ರಣೇತ್ರೀಂಚ ಪ್ರಣಮಾಮಿ ಸದಾಂಬಿಕಾಮ್
ಮಂಗಳಾಂ ಶೋಭನಾಂ ಶುದ್ಧಾಂ ನಿಷ್ಕಳಾಂ ಪರಮಾಂಕಲಾಂ
ವಿಶ್ವೇಶ್ವರೀಂ ವಿಶ್ವವಂದ್ಯಾಂ ಚಂಡಿಕಾಂ ಪ್ರಣಮಾಮ್ಯಹಂ
ಸರ್ವದೇವಮಯಿಂದೇವೀಂ ಸರ್ವದೇವ ನಮಸ್ಕೃತಾಂ
ಬ್ರಹ್ಮೇಶ ವಿಷ್ಣನಮಿತಾಂ ಪ್ರಣಮಾಮಿ ಸದಾಉಮಾಮ್
ವಿಂಧ್ಯಸ್ಥಾಂ ವಿಂಧ್ಯನಿಲಯಾಂ ದಿವ್ಯಸ್ಥಾನ ನಿವಾಸಿನೀಮ್
ಯೋಗಿನೀಂ ಯೋಗವಿದ್ಯಾಂಚ ಚಂಡಿಕಾಂ ಪ್ರಣಮಾಮ್ಯಹಂ
ಈಶಾನಮಾತರಂದೇವೀ ಮಾಶ್ವರೀಮೀಶ್ವರಪ್ರಿಯಾಮ್
ಪ್ರತಿತೋಮಿಸದಾದುರ್ಗಾಂ ಸಂಸಾರಾರ್ಣವ ತಾರಿಣೀಮ್
ದುರ್ಗಾ ಸಂಕಟಹಂತ್ರೀರೆ ದುರ್ಗೇತಿಪ್ರಥಿತಾಭುವಿ
ಸರ್ವಬುದ್ಯದಿದೇವೀ ಯಮಂತರ್ಯಮಿ ಸ್ವರೂಪಿಣಿ
ವೈಷ್ಣವಾನಾಂಚಶೈವನಾ ಮುಪಾಸ್ಯೇಯಂಚನಿತ್ಯಶ:
ಮೂಲಪ್ರಕೃತಿರೂಪಸಾ ಸೃಷ್ಟಿಸ್ಥಿತ್ಯಂತಕಾರಿಣೀ
ಸರ್ವದೇವಾಹರಿ ಬ್ರಹ್ಮಾಪ್ರಮುಖಾಮನವಸ್ತಥಾ
ಮನಯೋಜ್ಞಾನನಿಷ್ಠಾಶ್ಚಯೋಗಿ ನಶ್ಚಶ್ರಮಾಸ್ತಥಾ
ಲಕ್ಷ್ಮ್ಯಾದಯಸ್ತಥಾದೇವ್ಯ: ಸರ್ವಾಧ್ಯಾಯಂತಿಶಾಂತಿವಾಂ
ಇದಂಯ: ಪಠತೇಸ್ತೋತ್ರಂ ಶೃಣುಯಾದ್ವಾಪಿ ಭ್ಯಕ್ತಿತ:
ತದೇವ ಜನ್ಮಸಾಫಲ್ಯಂ ದುರ್ಗಾಸ್ಮರಣ ಮಸ್ತಿಚೇತ್
ಸಮುಕ್ತ:ಸರ್ವಪಾಪೇಭ್ಯೋ ದುರ್ಗಾಲೋಕೇಮಹೀಯತೇ

-- ಇತಿ ದುರ್ಗಾಸ್ತೋತ್ರಂ --

--------

**ಶ್ರೀ ಚಾಮುಂಡೇಶ್ವರೀ ಅಷ್ಟೋತ್ತರ ಶತನಾಮಾವಳಿ:**
**(ಮಹಾಬಲಾದ್ರಿ ಸ್ಥಿತಾ)**

ಓಂ ಶ್ರೀ ಚಾಮುಂಡಾಯ್ಕೆನಮ:
ಓಂ ಶ್ರೀ ಮಹಾಮಾಯಾರ್ಯ್ಕೆ ನಮ:
ಓಂ ಶ್ರೀಮತ್ಸಿಂಹಾಸನೇಶ್ವರ್ಯ್ಕೆ ನಮ:
ಓಂ ವಿದ್ಯಾವೇದ್ಯ ಮಹಿಮಾಯ್ಕೆ ನಮ:
ಓಂ ಶ್ರೀಚಕ್ರ ಪುರವಾಸಿನ್ಯೆತಿ ನಮ:

ಓಂ ಶ್ರೀಕಂಠದಯಿತಾಯೈ ನಮ:
ಓಂ ಗೌರ್ಯೈ ನಮ:
ಓಂ ಗಿರಿಜಾಯೈ ನಮ:
ಓಂ ಭುವನೇಶ್ವರ್ಯೈ ನಮ:
ಓಂ ಮಹಾಕಾಳ್ಯೈ ನಮ:
ಓಂ ಮಹಾಲಕ್ಷ್ಮ್ಯೈ ನಮ:
ಓಂ ಮಹಾವಾಣ್ಯೈ ನಮ:
ಓಂ ಮನೋನ್ಮನ್ಯೈ ನಮ:
ಓಂ ಸಹಸ್ರಶೀರ್ಷ ಸಂಯುಕ್ತಾಯೈ ನಮ:
ಓಂ ಸಹಸ್ರಕರ ಮಂಡಿತಾಯೈ ನಮ:
ಓಂ ಕೌಸುಂಭವದನೋಪೇತಾಯೈ ನಮ:
ಓಂ ರತ್ನಕಂಚುಕಧಾರಿಣ್ಯೈ ನಮ:
ಓಂ ಗಣೇಶ ಸ್ಕಂದ ಜನನ್ಯೈ ನಮ:
ಓಂ ಜಪಾಕುಸುಮಭಾಸುರಾಯೈ ನಮ:
ಓಂ ಉಮಾಯೈ ನಮ:
ಓಂ ಕಾತ್ಯಾಯನ್ಯೈ ನಮ:
ಓಂ ದುರ್ಗಾಯೈ ನಮ:
ಓಂ ಮಂತ್ರಿಣ್ಯೈ ನಮ:
ಓಂ ದಂಡಿನ್ಯೈ ನಮ:
ಓಂ ಜಯಾಯೈ ನಮ:
ಓಂ ಕರಾಂಗುಳನಖೋತ್ಪನ್ನಾಯೈ ನಮ:
ಓಂ ನಾರಾಯಣದಶಾಕೃತ್ಯೈ ನಮ:
ಓಂ ಸಚಾಮರರಮಾವಾಣಿ ಸವ್ಯದಕ್ಷಿಣ ಸೇವಿತಾಯೈ ನಮ:
ಓಂ ಇಂದ್ರಾಕ್ಷ್ಯೈ ನಮ:
ಓಂ ಬಗುಳಾಯೈ ನಮ:
ಓಂ ಬಾಲಾಯೈ ನಮ:
ಓಂ ಚಕ್ರೇಶ್ಯೈ ನಮ:
ಓಂ ವಿಜಯಾಯೈ ನಮ:
ಓಂ ಅಂಬಿಕಾಯೈ ನಮ:
ಓಂ ಪಂಚಪ್ರೇತಾಸನಾರೂಢಾಯೈ ನಮ:
ಓಂ ಹರಿದ್ರಾಕುಂಕುಮ ಪ್ರಿಯಾಯೈ ನಮ:
ಓಂ ಮಹಾಬಲಾದ್ರಿ ನಿಲಯಾಯೈ ನಮ:

ಓಂ ಮಹಿಷಾಸುರಮರ್ಧಿನ್ಯೈ ನಮ:
ಓಂ ಮಧುಕೈಭಟ ಸಂಹತ್ರ್ಯೈ ನಮ:
ಓಂ ಮಧುರಾಪುರನಾಯಕ್ಯೈ ನಮ:
ಓಂ ಕಾಮೇಶ್ವರ್ಯೈ ನಮ:
ಓಂ ಯೋಗನಿದ್ರಾಯೈ ನಮ:
ಓಂ ಭವಾನ್ಯೈ ನಮ:
ಓಂ ಚಂಡಿಕಾಯೈ ನಮ:
ಓಂ ಸತ್ಯೈ ನಮ:
ಓಂ ಚಕ್ರರಾಜರಥಾರೂಢಾಯೈ ನಮ:
ಓಂ ಸೃಷ್ಟಿಸ್ಥಿತ್ಯಂತಕಾರಿಣ್ಯೈ ನಮ:
ಓಂ ಅನ್ನಪೂರ್ಣಾಯೈ ನಮ:
ಓಂ ಜ್ವಲಜ್ಜಿಹ್ವಾಯೈ ನಮ:
ಓಂ ಕಾಳರಾತ್ರಿ ಸ್ವರೂಪಿಣ್ಯೈ ನಮ:
ಓಂ ನಿಶುಂಭಶುಂಭದಮನ್ಯೈ ನಮ:
ಓಂ ರಕ್ತಬೀಜನಿಷೂದಿನ್ಯೈ ನಮ:
ಓಂ ಬ್ರಾಹ್ಮ್ಯಾದಿಮುತೃಕರೂಪಾಯೈ ನಮ:
ಓಂ ಶುಭಾಯೈ ನಮ:
ಓಂ ಷಟ್ಚಕ್ರದೇವತಾಯೈ ನಮ:
ಓಂ ಮೂಲಪ್ರಕೃತಿರೂಪಾಯೈ ನಮ:
ಓಂ ಪಾರ್ವತ್ಯೈ ನಮ:
ಓಂ ಪರಮೇಶ್ವರ್ಯೈ ನಮ:
ಓಂ ಇಂದುಪೀಠಕೃತಾವಾಸಾಯೈ ನಮ:
ಓಂ ಚಂದ್ರಮಂಡಲ ಮಧ್ಯಗಾಯೈ ನಮ:
ಓಂ ಚಿದಗ್ನಿಕುಂಡ ಸಂಭೂತಾಯೈ ನಮ:
ಓಂ ವಿಂಧ್ಯಾಚಲನಿವಾಸಿನ್ಯೈ ನಮ:
ಓಂ ಹಯಗ್ರೀವಾಸ್ತ್ಯ ಪೂಜಿತಾಯೈ ನಮ:
ಓಂ ಸೂರ್ಯಚಂದ್ರಾಗ್ನಿ ಲೋಚನಾಯೈ ನಮ:
ಓಂ ಜಾಲಂಧರ ಸುಪೀಠಸ್ಥಾಯೈ ನಮ:
ಓಂ ಶಿವಾಯೈ ನಮ:
ಓಂ ದಾಕ್ಷ್ಯಾಯಣ್ಯೈ ನಮ:
ಓಂ ಈಶ್ವರ್ಯೈ ನಮ:
ಓಂ ನವಾವರಣ ಸಂಪೂಜ್ಯಾಯೈ ನಮ:

ಓಂ ನವಾಕ್ಷರ ಮನಸ್ತುತಾಯ್ಯೈ ನಮ:
ಓಂ ನವಲಾವಣ್ಯರೂಪಾಢ್ಯಾಯ್ಯೈ ನಮ:
ಓಂ ಚಂದ್ರರೇಖಾವಿಭೂಷಿತಾಯ್ಯೈ ನಮ:
ಓಂ ಚರಾಚರಜಗದ್ರೂಪಾಯ್ಯೈ ನಮ:
ಓಂ ನಿತ್ಯಕ್ಲಿನ್ನಾಯ್ಯೈ ನಮ:
ಓಂ ಅಪರಾಜಿತಾಯ್ಯೈ ನಮ:
ಓಂ ಓಡ್ಯಾಣಪೀಠನಿಲಯಾಯ್ಯೈ ನಮ:
ಓಂ ಲಲಿತಾಯ್ಯೈ ನಮ:
ಓಂ ವಿಷ್ಣುಸೋದರ್ಯೈ ನಮ:
ಓಂ ದಂಷ್ಟ್ರಾಕರಾಳವದನಾಯ್ಯೈ ನಮ:
ಓಂ ವಜ್ರೇಶ್ಯೈ ನಮ:
ಓಂ ವಹ್ನಿವಾಸಿನ್ಯೈ ನಮ:
ಓಂ ಸರ್ವರೂಪಾಢ್ಯಾಯ್ಯೈ ನಮ:
ಓಂ ಸಚ್ಚಿದಾನಂದವಿಗ್ರಹಾಯ್ಯೈ ನಮ:
ಓಂ ಅಷ್ಟಾದಶಸುಪೀಠಸ್ಥಾಯ್ಯೈ ನಮ:
ಓಂ ಭೇರುಂಡಾಯ್ಯೈ ನಮ:
ಓಂ ಭೈರವ್ಯೈ ನಮ:
ಓಂ ಪರಾಯ್ಯೈ ನಮ:
ಓಂ ರುಂಡಮಾಲಾಲಸತ್ಕರಾಯ್ಯೈ ನಮ:
ಓಂ ಭಂಡಾಸುರವಿಮರ್ದಿನ್ಯೈ ನಮ:
ಓಂ ಪುಂಡ್ರೇಕ್ಷುಕಾಂಡಕೋದಂಡಾಯ್ಯೈ ನಮ:
ಓಂ ಪುಷ್ಪಬಾಣಲಸತ್ಕರಾಯ್ಯೈ ನಮ:
ಓಂ ಶಿವದೂತ್ಯೈ ನಮ:
ಓಂ ವೇದಮಾತ್ರೇ ನಮ:
ಓಂ ಶಾಂಕರ್ಯೈ ನಮ:
ಓಂ ಸಿಂಹವಾಹಿನ್ಯೈ ನಮ:
ಓಂ ಚತುಶಷ್ಟ್ಯುಪಚಾರಾಢ್ಯಾಯ್ಯೈ ನಮ:
ಓಂ ಯೋಗಿನೀಗಣಸೇವಿತಾಯ್ಯೈ ನಮ:
ಓಂ ವನದುರ್ಗಾಯ್ಯೈ ನಮ:
ಓಂ ಭದ್ರಕಾಳ್ಯೈ ನಮ:
ಓಂ ಕದಂಬವನವಾಸಿನ್ಯೈ ನಮ:
ಓಂ ಚಂಡಮುಂಡಶಿರಚ್ಛೇತ್ರೇ ನಮ:

ಓಂ ಮಹಾರಾಜ್ಞೈತಿ ನಮ:
ಓಂ ಸುಧಾಮಯ್ಯೈ ನಮ:
ಓಂ ಶ್ರೀಚಕ್ರವರತಾಟಂಕಾಯ್ಯೈ ನಮ:
ಓಂ ಶ್ರೀಶೈಲಭ್ರಮರಾಂಬಿಕಾಯ್ಯೈ ನಮ:
ಓಂ ಶ್ರೀಮತ್ರಿಪುರಸುಂದರ್ಯ್ಯೈ ನಮ:
ಓಂ ಶ್ರೀ ಚಾಮುಂಡೇಶ್ವರ್ಯ್ಯೈ ನಮ:

**ಅಷ್ಟೋತ್ತರ ಶತನಾಮಾವಳಿ: ಸಂಪೂರ್ಣಂ**

------

**ಶ್ರೀ ಚಾಮುಂಡೇಶ್ವರಿ ಅಷ್ಟೋತ್ತರ ಶತನಾಮಾವಳಿ**

ಓಂ ಉಮಾಯ್ಯೈ ನಮ:
ಓಂ ಮಾಹೇಶ್ವರ್ಯ್ಯೈ ನಮ:
ಓಂ ಕಾಳ್ಯೈ ನಮ:
ಓಂ ಗಿರಿಜಾಯ್ಯೈ ನಮ:
ಓಂ ಶಾಂಕರ್ಯ್ಯೈ ನಮ:
ಓಂ ಶಿವಾಯ್ಯೈ ನಮ:
ಓಂ ಪಾರ್ವತ್ಯೈ ನಮ:
ಓಂ ಚಂಡಿಕಾಯ್ಯೈ ನಮ:
ಓಂ ಗೌರ್ಯೈ ನಮ:
ಓಂ ಜಗನ್ಮಾತ್ರೇ ನಮ:
ಓಂ ಶಿವಪ್ರಿಯಾಯ್ಯೈ ನಮ:
ಓಂ ಚಂದ್ರಚೂಡಾಯ್ಯೈ ನಮ:
ಓಂ ತ್ರಿನೇತ್ರಾಯ್ಯೈ ನಮ:
ಓಂ ಶಾಂಭವ್ಯೈ ನಮ:
ಓಂ ಸಿಂಹವಾಹಿನ್ಯೈ ನಮ:
ಓಂ ಗಜಾಸ್ಯಜನನ್ಯೈ ನಮ:
ಓಂ ಲೋಕಪೂಜಿತಾಯ್ಯೈ ನಮ:
ಓಂ ಅಭಯಂಕರ್ಯ್ಯೈ ನಮ:
ಓಂ ವೇದಮಾತ್ರೆ ನಮ:
ಓಂ ಗಾಯತ್ರ್ಯೈ ನಮ:
ಓಂ ವಿಶ್ವಾಧಾರಾಯ್ಯೈ ನಮ:

ಓಂ ಆತ್ಮರೂಪಿಣ್ಯೈ ನಮ:
ಓಂ ಕಾತ್ಯಾಯನ್ಯೈ ನಮ:
ಓಂ ಮಹಾಮಾಯಾಯೈ ನಮ:
ಓಂ ಶಕ್ತಿ ತ್ರಿವಿಧರೂಪಿಣ್ಯೈ ನಮ:
ಓಂ ಅನೇಕರೂಪಿಣ್ಯೈ ನಮ:
ಓಂ ಭದ್ರಾಯೈ ನಮ:
ಓಂ ಆರ್ಯಾಯೈ ನಮ:
ಓಂ ಅಪರ್ಣಾಯೈ ನಮ:
ಓಂ ಅಂಬಿಕಾಯೈ ನಮ:
ಓಂ ನಿತ್ಯಪ್ರದಾಯೈ ನಮ:
ಓಂ ಅಮೃತಾಯೈ ನಮ:
ಓಂ ನಿತ್ಯಾಯೈ ನಮ:
ಓಂ ಸೌಮ್ಯಾಯೈ ನಮ:
ಓಂ ಸೌಮ್ಯಾಯೈ ನಮ:
ಓಂ ಶರ್ವಾಣ್ಯೈ ನಮ:
ಓಂ ಭೈರವ್ಯೈ ನಮ:
ಓಂ ದಾಕ್ಷಾಯಿಣ್ಯೈ ನಮ:
ಓಂ ಮಹಾದೇವ್ಯೈ ನಮ:
ಓಂ ಕೈಲಾಸನಿಲಯಾಯೈ ನಮ:
ಓಂ ಸ್ಥಿರಾಯೈ ನಮ:
ಓಂ ಹಿಮಾದ್ರಿಜಾಯೈ ನಮ:
ಓಂ ನಿರಾಕಾರಾಯೈ ನಮ:
ಓಂ ವಿಂಧ್ಯಾಚಲನಿವಾಸಿನ್ಯೈ ನಮ:
ಓಂ ಸರ್ವಸೌಖ್ಯಾಯೈ ನಮ:
ಓಂ ದೃಢಾಯೈ ನಮ:
ಓಂ ಸಿದ್ಧಾಯೈ ನಮ:
ಓಂ ಸಾಮಗಾನವಿನೋದಿನ್ಯೈ ನಮ:
ಓಂ ಕಲ್ಯಾಣ್ಯೈ ನಮ:
ಓಂ ಕರುಣಾಯೈ ನಮ:
ಓಂ ಕಾಂತಾಯೈ ನಮ:
ಓಂ ಮೃಡಾಣ್ಯೈ ನಮ:
ಓಂ ಮುಕ್ತಿರೂಪಿಣ್ಯೈ ನಮ:

ಓಂ ಲಕ್ಷ್ಮೀಪ್ರದಾಯೈ ನಮ:
ಓಂ ಲಸನ್ಮೂರ್ತ್ಯೈ ನಮ:
ಓಂ ಕುಮಾರ್ಯೈ ನಮ:
ಓಂ ಕುಟಿಲಾಲಕಾಯೈ ನಮ:
ಓಂ ಸುರಸ್ತ್ರೀವನ್ದಿತಾಯೈ ನಮ:
ಓಂ ಶುದ್ಧಾಯೈ ನಮ:
ಓಂ ಶುಭಾಂಗ್ಯೈ ನಮ:
ಓಂ ಸುಲೋಚನಾಯೈ ನಮ:
ಓಂ ಮೇನಾತ್ಮಜಾಯೈ ನಮ:
ಓಂ ಹರಾರ್ಧಾಂಗ್ಯೈ ನಮ:
ಓಂ ನಿಶುಂಭಾಸುರಮರ್ದಿನ್ಯೈ ನಮ:
ಓಂ ತ್ರಿಲೋಕವಂದ್ಯಾಯೈ ನಮ:
ಓಂ ರುದ್ರಾಣ್ಯೈ ನಮ:
ಓಂ ಸರ್ವಸಂಪತ್ಪ್ರದಾಯೈ ನಮ:
ಓಂ ಶುಂಭದೈತ್ಯರಾಯೈ ನಮ:
ಓಂ ಸಾಧ್ವೈ ನಮ:
ಓಂ ರಕ್ತಬೀಜಪ್ರಭಂಜನ್ಯೈ ನಮ:
ಓಂ ಚತುರ್ಭುಜಾಯೈ ನಮ:
ಓಂ ಅಷ್ಟಭುಜಾಯೈ ನಮ:
ಓಂ ಸುಸಹಸ್ರಭುಜಾಯೈ ನಮ:
ಓಂ ಅಯುತಭುಜಾಯೈ ನಮ:
ಓಂ ಚಂಡಮುಂಡಹರಾಯೈ ನಮ:
ಓಂ ಶ್ಯಾಮಾಯೈ ನಮ:
ಓಂ ಮಹಿಷಾಸುರಮರ್ಧಿನ್ಯೈ ನಮ:
ಓಂ ಭಕ್ತಿಪ್ರದಾಯೈ ನಮ:
ಓಂ ಭೋಗಕರ್ಯೈ ನಮ:
ಓಂ ಭುಜಂಗಮಣಿಭೂಷಿತಾಯೈ ನಮ:
ಓಂ ಕೈವಲ್ಯದಾಯಿನ್ಯೈ ನಮ:
ಓಂ ಶಾಂತಾಯೈ ನಮ:
ಓಂ ಶಾಶ್ವತ್ಯೈ ನಮ:
ಓಂ ಶಂಬುವಲ್ಲಭಾಯೈ ನಮ:
ಓಂ ಆಯುಷ್ಕರ್ಯೈ ನಮ:

ಓಂ ವರಿಷ್ಟಾಯೈ ನಮ:
ಓಂ ನರ್ಮದಾಯೈ ನಮ:
ಓಂ ನಿಗಮಾಲಯಾಯೈ ನಮ:
ಓಂ ಭಕ್ತಾಧೀನಾಯೈ ನಮ:
ಓಂ ಭಗವತ್ಯೈ ನಮ:
ಓಂ ಭಾನುಮಂಡಲಮಧ್ಯಗಾ ನಮ:
ಓಂ ಪೃಥ್ವೀಸ್ವರೂಪಾಯೈ ನಮ:
ಓಂ ಪೃಥುಲಾಯೈ ನಮ:
ಓಂ ಪ್ರಜಾಸೃಷ್ಟಿವಿಧಾಯಿನ್ಯೈ ನಮ:
ಓಂ ವಿಶ್ವಧ್ಯೇಯಾಯೈ ನಮ:
ಓಂ ಅನಂತರೂಪಾಯೈ ನಮ:
ಓಂ ಸರ್ವಾಭರಣಭೂಷಿತಾಯೈ ನಮ:
ಓಂ ಭವಾನ್ಯೈ ನಮ:
ಓಂ ಭದ್ರಕಾಳ್ಯೈ ನಮ:
ಓಂ ಬ್ರಹ್ಮವಿಷ್ಣುಶಿವಾತ್ಮಿಕಾಯೈ ನಮ:
ಓಂ ಸ್ಕಂದಮಾತ್ರೇ ನಮ:
ಓಂ ಹೈಮವತ್ಯೈ ನಮ:
ಓಂ ಮಹಾತ್ರಿಪುರಸುಂದರ್ಯೈ ನಮ:
ಓಂ ವಸಿಷ್ಟಕಶ್ಯಪಾದಿನಾಂ ಸರ್ವಸಂಪತ್ಪ್ರದಾಯನ್ಯೈ ನಮ:
ಓಂ ಕೃಪಾಶೀಲಾಯೈ ನಮ:
ಓಂ ವೇದಮಾತ್ರೇ ನಮ:
ಓಂ ವರದಾಯೈ ನಮ:
ಓಂ ಸರ್ವಮಂಗಳಾಯೈ ನಮ:
ಓಂ ಶುಭಾಯೈ ನಮ:
ಓಂ ಮನೋನ್ಮನ್ಯೈ ನಮ:
--ಇತಿ ಶ್ರೀ ಚಾಮುಂಡೇಶ್ವರೀ ಅಷ್ಟೋತ್ತರ ಶತನಾಮಾವಳಿ--
-----------
(ಸರ್ಕಾರ (ಮುಜರಾಯಿ ಇಲಾಖೆ) ಕಲ್ಪಿಸಿರುವ ಸೌಲಭ್ಯಗಳು, ದೇವಸ್ಥಾನದಲ್ಲಿಯ ಅರ್ಚನೆ/ಪೂಜಾದಿಗಳ ವಿವರ, ದೇವಸ್ಥಾನ ತೆರೆದಿರುವ ವೇಳೆ, ನಿರ್ವಹಣಾಧಿಕಾರಿಯ ಕಚೇರಿ ವಿಳಾಸ ಇವುಗಳನ್ನು ಸೇರಿಸಿ ಪೂರ್ತಿಗೊಳಿಸಬೇಕಾಗಿದೆ).
-------